ವಿಜಯಪುರ | ಸಂಪುಟ 04 | ಸಂಚಿಕೆ 216 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಅಕ್ಟೋಬರ್ 20, 2026



"ಐದು ಜನಪರ ಗ್ಯಾರಂಟಿ ಯೋಜನೆಗಳನ್ನು ಅಳವಡಿಸಿರುವುದರಿಂದ, ರಾಜ್ಯ ಸರ್ಕಾರದಿಂದ ಸಾಲ ಮನ್ನಾ ಘೋಷಿಸಲು ಸಾಧ್ಯವಿಲ್ಲ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಅವರೊಂದಿಗೆ ಸಂಪರ್ಕದಲ್ಲಿದೆ. ಆದ-ಾಗ್ಯೂ, ಬರಗಾಲದಿಂದ ಸಂಕಷ್ಟದಲ್ಲಿರುವ ರೈತರಿಗೆ ರಾಜ್ಯ ಸರ್ಕಾರ ಅಗತ್ಯ ನೆರವು ನೀಡಲಿದೆ."

■ ಬಿ.ಕೆ. ಹರಿಪ್ರಸಾದ್
ಕೆಪಿಸಿಸಿ ಅಧ್ಯಕ್ಷರು

## ಅ.23 ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ದಿನಾಚರಣೆ ಕಾರ್ಯಕ್ರಮ ಅ.23ರ ಬೆಳಿಗ್ಗೆ 10:30 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9 ಗಂಟೆಗೆ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಕೇಂದ್ರ ಬಸ್ ನಿಲ್ದಾಣದಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಬಳಿಕ 9:30 ಗಂಟೆಗೆ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ಭಾವಚಿತ್ರದ ಮೆರವಣಿಗೆ ನಡಿಯಲಿದೆ.

ಅಂದು ಬೆಳಿಗ್ಗೆ 10-30ಕ್ಕೆ ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ.ಪಾಟೀಲ ಉದ್ಘಾಟಿಸಲಿದ್ದಾರೆ. ನಗರ ಶಾಸಕರಾದ ಬಸನಗೌಡ ಆರ್.ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಡಾ.ಶರಣಗೌಡ ಪಾಟೀಲ ಅವರು ಉಪನ್ಯಾಸ ನೀಡಲಿದ್ದಾರೆ ಹಾಗೂ ಶ್ರೀಮತಿ ಭಾರತಿ ಕುಂದನಗಾರ(ಸೋನಾರ) ಅವರು ಸುಗಮ ಸಂಗೀತ ಕಾರ್ಯಕ್ರಮ ನಡೆಸಲ್ಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

## ಅ.21 ರಂದು ಪೊಲೀಸ್ ಹುತಾತ್ಮರ ದಿನಾಚರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಅ.21 ರಂದು ಬೆಳಿಗ್ಗೆ 8 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯತ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಹರೀಶ ಎ. ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ವಿಶೇಷ ಅತಿಥಿಗಳಾಗಿ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಆನಂದ ಪ್ರಕಾಶ ಮೀನಾ ಅವರು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಪೊಲೀಸ್ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಕೇಂದ್ರ ಸಚಿವ ಜೋಶಿ ಭರವಸೆ ಬೆನ್ನಲ್ಲೇ ಕಬ್ಬು ಬೆಳೆಗಾರರ ಹೋರಾಟ ಅಂತ್ಯ: ಒಂದು ತಿಂಗಳ ಕಾಲಾವಕಾಶ ನೀಡಿದ ರೈತರು

ಧಾರವಾಡ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರ ಭರವಸೆ ಹಿನ್ನೆಲೆಯಲ್ಲಿ, ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಬ್ಬು ಬೆಳೆಗಾರರು ಕಳೆದ ಒಂದು ವಾರದಿಂದ ನಡೆಸುತ್ತಿದ್ದ ಪಾದಯಾತ್ರೆ ಸೋಮವಾರ ಅಂತ್ಯವಾಗಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಕಳೆದೊಂದು ವಾರದಿಂದ ಚುರುಕು ಮುಟ್ಟಿಸಿದ್ದ ಹೋರಾಟಗಾರರು ಕೆಲವು ಷರತ್ತುಗಳನ್ನು ಇಟ್ಟು ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾರೆ.

ಬಳಿಕ ಇಂದು ಯರಿಕೊಪ್ಪ ಕ್ರಾಸ್ ಬಳಿ ಬಹಿರಂಗ ಸಭೆ ಸೇರಿದ್ದ ರೈತರಿಗೆ ರೈತ ಮುಖಂಡರು ಹುಬ್ಬಳ್ಳಿಯಲ್ಲಿ ನಡೆದ ಸಭೆಯ ವಿವರವನ್ನು ನೀಡಿದರು. ಸಭೆಯಲ್ಲಿ ಮಾತನಾಡಿದ ಪಾದಯಾತ್ರೆಯ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ, ಹುಬ್ಬಳ್ಳಿಯಲ್ಲಿ ಕೇಂದ್ರ ಸಚಿವರು ಸಭೆ ನಡೆಸಿ ಭರವಸೆ ನೀಡಿದ್ದಾರೆ. ಕನಿಷ್ಠ ಬೆಂಬಲ ಬೆಲೆ (ಒಖಿಕ) ವಿಚಾರವಾಗಿ ಕಾಲಾವಕಾಶ ಕೇಳಿದ್ದು, ಅವರ ಮಾತಿಗೆ ಬೆಲೆ ನೀಡಿ ಎಲ್ಲರೂ ಅವಕಾಶ ನೀಡೋಣ. ಮುಂದಿನ ನಾಲ್ಕೈದು ದಿನಗಳಲ್ಲಿ ಬೆಳಗಾವಿಯಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ರೈತ ಮುಖಂಡರ ಸಭೆ ನಡೆಯಬೇಕು. ಅಲ್ಲದೆ, ಕಾರ್ಖಾನೆಗಳಿಂದ ಸಕ್ಕರೆ ಹೊರಗೆ ಸಾಗಣೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಳೆದೊಂದು ವಾರದಿಂದ ಕಬ್ಬು ಬೆಳೆಗಾರರು ಧಾರವಾಡ ತಾಲೂಕಿನ ಯರಿಕೊಪ್ಪ ಗ್ರಾಮದ ಬಳಿ ಧರಣಿ ಕುಳಿತಿದ್ದರು. ಎರಡು ದಿನಗಳ ಕಾಲ ಹೆದ್ದಾರಿ ಬಂದ್ ಮಾಡಿದ್ದ ರೈತರು ಬಳಿಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಗಮನಿಸಿ, ಹೆದ್ದಾರಿ ಬಂದ್ ಮರಳಿ ಪಡೆದಿದ್ದರು. ಆದರೆ ಹೆದ್ದಾರಿ ಪಕ್ಕದಲ್ಲಿ ಟೆಂಟ್ ಹಾಕಿ ಹೋರಾಟವನ್ನು ಮುಂದುವರೆಸಿದ್ದರು. ಈ ಒಟ್ಟಾರೆ ಹೋರಾಟ ಇಂದು ಏಳನೇ ದಿನಕ್ಕೆ ಕಾಲಿಟ್ಟಿತ್ತು. ಭಾನುವಾರ ತಡರಾತ್ರಿ ಹುಬ್ಬಳ್ಳಿಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹಾಗೂ ರೈತ ನಾಯಕರು ಭಾಗವಹಿಸಿದ್ದರು. ಈ ವೇಳೆ ತಜ್ಞರ ಸಮಿತಿಯ ವರದಿ ಬಂದ ಬಳಿಕ ನಿರ್ಧಾರ ತೆಗೆದುಕೊಳ್ಳುವುದಾಗಿ ಜೋಶಿ ಭರವಸೆ ನೀಡಿದ ಬಳಿಕ ಹೋರಾಟವನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಯಿತು.

ನ.27ರಂದು ಎಲ್ಲರೂ ಹೋರಾಟಕ್ಕೆ ಸಿದ್ಧ-ರಿರೋಣ: ನಮ್ಮ ಬೇಡಿಕೆ ಈಡೇರಿಸಲು ನವೆಂಬರ್ 26ರವರೆಗೆ ಅವರಿಗೆ ಕಾಲಾವಕಾಶ ನೀಡಲಾಗಿದೆ. ಅಷ್ಟರಲ್ಲಿ ಬೇಡಿಕೆ ಈಡೇರಿಸಬೇಕು. ಅಲ್ಲದೆ, ಸಿಎಂ ಅವರು ಸುವರ್ಣ ಸೌಧದಲ್ಲಿ ಸಭೆ ಮಾಡಬೇಕು. ಸಿಎಂ ಹಾಗೂ ಕೇಂದ್ರ ಸಚಿವರ ಮಾತಿಗೆ ನಾವೆಲ್ಲ ಬೆಲೆ ಕೊಡೋಣ.

## ಪತಿಯ ಹತ್ಯೆಗೆ ಪತ್ನಿಯಿಂದಲೇ ಸ್ಕೆಚ್! :ಮೂವರು ಅರೆಸ್ಟ್

■ ಉದಯರಶ್ಮಿ ದಿನಪತ್ರಿಕೆ



**ವಿಜಯಪುರದಲ್ಲಿ ರಸ್ತೆ ಅಪಘಾತ ಎಂದು ದಾಖಲಾಗಿದ್ದ ಪ್ರಕರಣ 'ಕೊಲೆ'ಯಾಗಿ ತಿರುವು**

ವಿಜಯಪುರ: ನಗರದಲ್ಲಿ ರಸ್ತೆ ಅಪಘಾತ ಎಂದು ದಾಖಲಾಗಿದ್ದ ಪ್ರಕರಣ ಈಗ ಕೊಲೆ ಎಂಬುದು ಬೆಳಕಿಗೆ ಬಂದಿದ್ದು, ತನ್ನ ಪತಿಯನ್ನೇ ಹತ್ಯೆ ಮಾಡಲು ಪತ್ನಿಯೇ ಸಂಚು ರೂಪಿಸಿದ ಪ್ರಸಂಗ ಹೊರಬಂದಿದೆ.

ಪೊಲೀಸರ ಚಾಣಾಕ್ಷ ತನಿಖೆಯಿಂದ ಈ ಪ್ರಕರಣ ಹೊರಬಂದಿದೆ. ಕಳೆದ ಅ.4 ರಂದು ರಾಜಶೇಖರ ಬಿರಾದಾರ ಅವರ ರಸ್ತೆ ಅಪಘಾತವಾಗಿತ್ತು. ಜುಮನಾಳ ರಿಂಗ್ ರೋಡ್ ಬಳಿ ವಾಕಿಂಗ್ ಹೋಗುವ ಸಂದರ್ಭದಲ್ಲಿ ವಾಹನ ಡಿಕ್ಕಿಯಾಗಿ ಅವರು ಮೃತಪಟ್ಟಿದ್ದಾರೆ ಎಂದು ಪ್ರಕರಣ ದಾಖಲಾಗಿತ್ತು. ಸಹಜ ಅಫಘಾತವೆಂದೆ ಭಾವಿಸಲಾಗಿತ್ತು. ಆದರೂ ಸಹ ಪೊಲೀಸ-ರಿಗೆ ಈ ಅಪಘಾತ ಸಂಶಯ ಮೂಡಿಸಿತ್ತು. ಈ ಹಿನ್ನೆಲೆಯಲ್ಲಿ ತನಿಖೆ ನಡೆಸಿದಾಗ ಅನೇಕ ವಿಷಯಗಳು ಬೆಳಕಿಗೆ ಬಂದು ಪೂರ್ವಯೋಜಿತ ಕೊಲೆ ಎಂಬುದು ತನಿಖೆವೇಳೆ ಧೃಡಪಟ್ಟಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಆನಂದ ರಾವುತಪ್ಪ ಕಲ್ಲೂರ (25), ಅಶ್ವಿನಿ ರಾಜಶೇಖರ ಬಿರಾದಾರ (30), ಸಚಿನ ಪರಶುರಾಮ ಬಡಳ್ಳಿ ಅವರನ್ನು ಬಂಧಿಸಲಾಗಿದೆ.

### ಬೆಳಕಿಗೆ ಬಂದದ್ದು ಹೇಗೆ?

ಪ್ರಕರಣದ ತನಿಖೆ ವೇಳೆ ಅಪಘಾತದ ಕುರಿತು ಅನುಮಾನಗಳು ವ್ಯಕ್ತವಾದ ಹಿನ್ನೆಲೆಯಲ್ಲಿ, ಮುಂದಿನ ತನಿಖೆಯನ್ನು ವಿಜಯಪುರ ನಗರ ಡಿವೈಎಸ್ಪಿ ನಾಗರಾಜ ಜಿ. ಅವರಿಗೆ ವಹಿಸಲಾಗಿತ್ತು. ತನಿಖೆ ಕೈಗೊಂಡ ಅವರು, ಮದೀನಾ ನಗರದ ಪೇಂಟರ್ ಆನಂದ ರಾವುತಪ್ಪ ಕಲ್ಲೂರ (25) ಅವರನ್ನು ವಿಚಾರಣೆಗೆ ಒಳಪಡಿಸಿದಾಗ ಪ್ರಕರಣದ ಹಿಂದಿನ ಸಂಚು ಬೆಳಕಿಗೆ ಬಂದಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ ವಿವರಿಸಿದರು.

ಸುಮಾರು 10 ವರ್ಷಗಳ ಹಿಂದೆ ಕೊಲೆಗೀಡಾಗಿರುವ ರಾಜಶೇಖರ ಮತ್ತು ಅಶ್ವಿನಿ ವಿವಾಹವಾಗಿದ್ದು, ಅವರಿಗೆ ಆರು ವರ್ಷದ ಅವಳಿ ಗಂಡು ಮಕ್ಕಳು ಜನಿಸಿದ್ದಾರೆ, ಏಳು ತಿಂಗಳ ಹಿಂದೆ ಹೊಸ ಮನೆ ನಿರ್ಮಿಸಿದ್ದ ರಾಜಶೇಖರ ಅವರು, ಮನೆಯ ಪೇಂಟಿಂಗ್ ಕೆಲಸವನ್ನು ಆನಂದ ಕಲ್ಲೂರ ಅವರಿಗೆ ನೀಡಿದ್ದರು. ಈ ಸಂದರ್ಭದಲ್ಲಿ ಅಶ್ವಿನಿ ಮತ್ತು ಆನಂದ ನಡುವೆ ಪರಿಚಯ ಬೆಳೆದು ಸ್ನೇಹವಾಗಿತ್ತು. ಪತಿಯಿಂದ ದೂರವಾಗಲು ಬಯಸಿದ್ದ ಅಶ್ವಿನಿ, ರಾಜಶೇಖರ ಅವರನ್ನು ಕೊಲೆ ಮಾಡುವ ಕುರಿತು ಆನಂದನೊಂದಿಗೆ ಚರ್ಚಿಸಿ ಸಂಚು ರೂಪಿಸಿದ್ದರು ಎಂದು ತನಿಖೆಯಲ್ಲಿ ತಿಳಿದುಬಂದಿದೆ.

'ಕಿಲ್ಲಿಂಗ್' ಸ್ಕೆಚ್

ಯೋಜನೆಯಂತೆ, ಅ. 4ರಂದು ಮುಂಜಾನೆ ರಾಜಶೇಖರ ವಾಕಿಂಗ್‌ಗೆ ತೆರಳಿದ್ದ ಮಾಹಿತಿಯನ್ನು ಅಶ್ವಿನಿ, ಆನಂದನಿಗೆ ನೀಡಿದ್ದಳು. ಆನಂದ ತನ್ನ ಬೈಕ್‌ನಲ್ಲಿ ರಾಜಶೇಖರ ಅವರನ್ನು ಹಿಂಬಾಲಿಸಿ, ಅವರಿರುವ ಸ್ಥಳದ ಬಗ್ಗೆ ಸಚಿನ ಪರಶುರಾಮ ಬಡಳ್ಳಿ (24) ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನಿಗೆ ಮಾಹಿತಿ ನೀಡಿದ್ದನು. ಬಳಿಕ ಸಚಿನ ಮತ್ತು ಬಾಲಕ ನಂಬರ್ ಪ್ಲೇಟ್ ಇಲ್ಲದ ಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನದಲ್ಲಿ ಬಂದು, ಜುಮನಾಳ ರಸ್ತೆಯ ಕಿಯಾ ಶೋರೂಂ ಸಮೀಪ ನಡೆದುಕೊಂಡು ಹೋಗುತ್ತಿದ್ದ ರಾಜಶೇಖರ ಅವರಿಗೆ ಹಿಂದಿನಿಂದ ವಾಹನ ಡಿಕ್ಕಿ ಹೊಡೆಸಿ ಕೊಲೆ ಮಾಡಿದ್ದಾರೆ ಎಂಬುದು ತನಿಖೆಯಲ್ಲಿ ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಮೈಸೂರಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ | ಪ್ರಧಾನಿ ನರೇಂದ್ರ ಮೋದಿ ಭೇಟಿಗೆ ಸಮಯ ಕೋರಿಕೆ**

# ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಪ್ರಧಾನಿ ಜೊತೆ ಚರ್ಚೆ

ಮೈಸೂರು: ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ರಾಜ್ಯದಲ್ಲಿನ ಬರ ಪರಿಸ್ಥಿತಿ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗೆ ಸಮಯ ಕೋರಿರುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.



ಪ್ರಧಾನಿ ಅವರನ್ನು ಭೇಟಿ ಮಾಡಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ವಪಕ್ಷಗಳ ನಿಯೋಗ ತೆರಳುವಂತೆ ಮಾಡಲು ಪ್ರತಿಪಕ್ಷಗಳ ನಾಯಕ-ರಿಗೂ ಮನವಿ ಮಾಡುವುದಾಗಿ ಡಿ ಕೆ ಶಿವಕುಮಾರ್ ಹೇಳಿದರು. ಮೈಸೂರು ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ಈ ಹಿಂದೆ ಪ್ರತಿಪಕ್ಷಗಳ ನಾಯಕರು ನಿಯೋಗದಲ್ಲಿ ಭಾಗವಹಿಸುವ ಇಚ್ಛೆ ವ್ಯಕ್ತಪಡಿಸಿದ್ದರು. ಈಗಲೂ ಅವರು ನಿಯೋಗದೊಂದಿಗೆ ಬರಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು. ಕಬ್ಬು ಬೆಳೆಗಾರರ ಪ್ರತಿಭಟನೆ ಮುಂದುವರಿದಿರುವ ಕು-ರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಪ್ರತಿಭಟನೆ ಹಿಂಪಡೆದು ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಪ್ರತಿಭಟನಾಕಾರರಲ್ಲಿ ಮನವಿ ಮಾಡಿದರು. ನಾನು ರೈತರೊಂದಿಗೆ ಮಾತನಾಡಿದ್ದೇನೆ. ಪ್ರತಿಭಟನೆ ಹಿಂಪಡೆಯುವಂತೆ ಮಾಧ್ಯಮಗಳ ಮೂಲಕ ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ. ಎಲ್ಲರೂ ಒಟ್ಟಿಗೆ ಕುಳಿತು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಈ ವಿಷಯದಲ್ಲಿ ರಾಜಕೀಯ ಮಾಡುವುದು ಅಥವಾ ಯಾರನ್ನಾದರೂ ಟೀಕಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಮುಖ್ಯಮಂತ್ರಿಯಾಗಿ ನನಗೆ ಜವಾಬ್ದಾರಿಯಿದೆ. ಕೇವಲ ಆರೋಪ-ಪ್ರತ್ಯಾರೋಪಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ. ರೈತರು ಮತ್ತು ಜನರ ಕಲ್ಯಾಣ ಖಚಿತಪಡಿಸುವುದೇ ನಮ್ಮ ಉದ್ದೇಶ ಎಂದರು.

### ಕೇಂದ್ರ ಕೃಷಿ ಸಚಿವರೊಂದಿಗೆ ಚರ್ಚಿಸುವೆ :ಹೆಚ್.ಡಿ.ಕೆ



ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಆದಷ್ಟು ಬೇಗ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರೊಂದಿಗೆ ಚರ್ಚಿಸುವುದಾಗಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆಗಳ ಸಚಿವ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಅಧ್ಯಯನ ಮಾಡಲು ರಚಿಸಿರುವ ತಜ್ಞರ ಸಮಿತಿಯ ವರದಿಗಾಗಿ ಕಾಯುತ್ತಿದೆ. ಹೀಗಾಗಿ ರೈತರು ತಾಳ್ಮೆ ಕಳೆದುಕೊಳ್ಳದೆ ಶಾಂತಿ ಕಾಪಾಡಿಕೊಳ್ಳಬೇಕು ಎಂದು ಅವರು ಹೇಳಿದರು.

ರಾಜ್ಯ ಸರ್ಕಾರ ಕೇಂದ್ರದ ನೆರವನ್ನೇ ಅವಲಂಬಿಸದೆ, ರೈತರ ಹಿತಾಸಕ್ತಿ ರಕ್ಷಿಸಲು ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು ಎಂದರು. ಕಬ್ಬಿಗೆ ಪ್ರತಿ ಟನ್‌ಗೆ 1,000 ರೂಪಾಯಿ ಕನಿಷ್ಠ ಬೆಂಬಲ ಬೆಲೆ (ಒಖಿಕ) ಘೋಷಿಸುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆಗೆ ಬದ್ಧರಾಗಿರಬೇಕು ಎಂದು ಕುಮಾರಸ್ವಾಮಿ ಒತ್ತಾಯಿಸಿದರು.

## ಅ.21 ರಂದು ಶ್ರೀ ಮಧ್ವಾಚಾರ್ಯರ ಜಯಂತಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀ ಜಗದ್ಗುರು ಶ್ರೀ ಮಧ್ವಾಚಾರ್ಯರ ಜಯಂತಿ ದಿನಾಚರಣೆ ಕಾರ್ಯಕ್ರಮ ಅ.21ರ ಬೆಳಿಗ್ಗೆ 10:30 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9:30 ಗಂಟೆಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ಭಾವಚಿತ್ರದ ಮೆರವಣಿಗೆ ನಡಿಯಲಿದೆ.

ಅಂದು ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ.ಪಾಟೀಲ ಉದ್ಘಾಟಿಸಲಿದ್ದಾರೆ. ನಗರ ಶಾಸಕರಾದ ಬಸನಗೌಡ ಆರ್.ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಪಂಡಿತ ಮಧ್ವಾಚಾರ್ಯ ಮೊಕಾಶಿ ಅವರು ಉಪನ್ಯಾಸ ನೀಡಲಿದ್ದಾರೆ.

ಹಾಗೂ ಶ್ರೀಮತಿ ವಿಶಾಲ ಕಟ್ಟಿ ಅವರು ಸುಗಮ ಸಂಗೀತ ಕಾರ್ಯಕ್ರಮ ನಡೆಸಲ್ಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

**ಮಳೆ ಕೊರತೆ, ಕಬ್ಬಿನ ಬೆಳವಣಿಗೆ ಕುಂಠಿತ | ರಿಕವರಿ ಆತಂಕದಲ್ಲಿ ರೈತರು, ಸಕ್ಕರೆ ಕಾರ್ಖಾನೆಗಳು!**

## ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಬೇಕು :ಶಾಸಕ ಪಾಟೀಲ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಮಳೆಯ ಕೊರತೆಯಿಂದ ಕಬ್ಬಿನ ಬೆಳವಣಿಗೆ ಕುಂಠಿತವಾಗಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಸಕ್ಕರೆ ಅಂಶ ಸಿಗದೆ ರಿಕವರಿ ಕುಸಿಯುವ ಆತಂಕ ಕಬ್ಬು ಬೆಳೆಗಾರರನ್ನು ಕಾಡುತ್ತಿದೆ. ಒಂದೆಡೆ ಬೆಳೆ ಬೆಳೆಯಲು ಮಾಡಿದ ಖರ್ಚು ಕೈಗೆಟುಕದ ಸ್ಥಿತಿಯಲ್ಲಿದ್ದರೆ, ಮತ್ತೊಂದೆಡೆ ಕಬ್ಬಿನ ಇಳುವರಿ ಹಾಗೂ ರಿಕವರಿ ಕಡಿಮೆಯಾದರೆ ಅದರ ಪರಿಣಾಮ ರೈತರ ಆದಾಯದ ಜೊತೆಗೆ ಸಕ್ಕರೆ ಕಾರ್ಖಾನೆಗಳ ಆರ್ಥಿಕ ಸ್ಥಿತಿಯ ಮೇಲೂ ಬೀಳಲಿದೆ. ಇಂತಹ ಸಂಕಷ್ಟದ ನಡುವೆ ರೈತರು ಮತ್ತು ಕಾರ್ಖಾನೆಯ ಉಳಿವಿಗೆ ಪರಸ್ಪರ ಸಹಕಾರ ಅತ್ಯಗತ್ಯ ಎಂದು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ಮರಗೂರ ಧೂಳಖೇಡ ಬಳಿಯ ಶ್ರೀ ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಸೋಮವಾರ ನಡೆದ 9ನೇ ವರ್ಷದ ಅಗ್ನಿ ಪ್ರದೀಪನ ಹಾಗೂ ಬಾಯ್ಲರ್ ಮತ್ತು ಕೇನಕ್ಯಾರಿಯರ್ (ಮೋಳಿ) ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ಭೀಮಾಶಂಕರ ಕಾರ್ಖಾನೆ ನನ್ನೊಬ್ಬನದ್ದಲ್ಲ. ಇದು ಇಂಡಿ, ಸಿಂದಗಿ ಹಾಗೂ ಚಡಚಣ ಭಾಗದ ರೈತರ ಕನಸಿನ ಕೂಸು. ಇದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ರೈತರ ಕೈಯಲ್ಲಿದೆ. ಆದರೆ, ಪ್ರಕೃತಿಯ ವೈಪರೀತ್ಯದಿಂದ ಸಮಯಕ್ಕೆ ಸರಿಯಾಗಿ ಮಳೆಯಾಗದೆ ಕಬ್ಬಿನ ಬೆಳವಣಿಗೆಗೆ ಹೊಡೆತ ಬಿದ್ದಿದೆ. ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆಯಾದರೆ ರಿಕವರಿ ಕುಸಿಯುತ್ತದೆ. ರಿಕವರಿ ಕಡಿಮೆಯಾದರೆ ಸಕ್ಕರೆ ಉತ್ಪಾದನೆ ಇಳಿಕೆಯಾಗುತ್ತದೆ. ಇದರಿಂದ ರೈತರು ಮತ್ತು ಕಾರ್ಖಾನೆಗಳೆರಡೂ ಆರ್ಥಿಕ ಸಂಕಷ್ಟ ಎದು-ರಿಸಬೇಕಾಗುತ್ತದೆ" ಎಂದು ಅವರು ವಿವರಿಸಿದರು.

### ರೈತರು ಕೈಜೋಡಿಸಿದರೆ ಕಾರ್ಖಾನೆಗೆ ಬಲ

ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಉತ್ತಮ ಗುಣಮಟ್ಟದ ಯಂತ್ರೋಪಕರಣಗಳನ್ನು ಅಳವಡಿಸಲಾಗಿದ್ದು, ಅವು ದೀರ್ಘಕಾಲ ಬಾಳಿಕೆ ಬರುವ ಸಾಮರ್ಥ್ಯ ಹೊಂದಿವೆ. ಆದರೆ ಯಂತ್ರೋಪಕರಣಗಳ ಗುಣಮಟ್ಟವೊಂದರಿಂದಲೇ ಕಾರ್ಖಾನೆ ಲಾಭದಾಯಕವಾಗಲು ಸಾಧ್ಯವಿಲ್ಲ. ರೈತರು ಸರಿಯಾದ ಸಮಯಕ್ಕೆ ಕಟಾವಿಗೆ ಯೋಗ್ಯವಾದ ಕಬ್ಬನ್ನು ಪೂರೈಸುವುದು, ಉತ್ತಮ ರಿಕವರಿ ದೊರೆಯುವಂತೆ ಕೃಷಿ ನಿರ್ವಹಣೆ ಮಾಡುವುದು ಹಾಗೂ ಕಾರ್ಖಾನೆಯೊಂದಿಗೆ ಸಹಕಾರ ಹೊಂದುವುದು ಅಗತ್ಯ ಎಂದು ಹೇಳಿದರು.

ಹತ್ತಳ್ಳಿ ಮಠದ ಗುರು ಗುರುಪಾದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಖೇಡಗಿ ಮಠದ ಶಿವಬಸವ ಮಹಾಸ್ವಾಮಿಗಳು, ತಡವಲಗಾ ಮಠದ ಷ.ಬ್ರ. ಅಭಿನವ ರಾಚೋಟ್ಟೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ವಿಜಯ ಮಹಾಂತೇಶ ಶಿವಾಚಾರ್ಯ ಮಹಾಸ್ವಾಮಿಗಳು, ಎಂ.ಆರ್. ಪಾಟೀಲ, ಭೀಮುಕಾಕಾ ಕವಲಗಿ, ಶ್ರೀಮಂತ ಇಂಡಿ, ಜೇಟ್ಟೆಪ್ಪ ರವಳಿ, ನೀಲಕಂಠ ರೂಗಿ, ಸಣ್ಣಪ್ಪ ತಳವಾರ, ಬಿ.ಸಿ. ಸಾವಕಾರ, ಧರ್ಮಣ್ಣ ವಾಲಿಕಾರ ಸೇರಿದಂತೆ ಇಂಡಿ, ಸಿಂದಗಿ ಮತ್ತು ಚಡಚಣ ಭಾಗದ ರೈತರು ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರ ನಿಗದಿಪಡಿಸಿರುವ ಸಕ್ಕರೆಯ ಕನಿಷ್ಠ ಮಾರಾಟ ದರ ಪ್ರತಿ ಕೆ.ಜಿ.ಗೆ 31 ಇರುವುದರಿಂದ ಉತ್ಪಾದನಾ ವೆಚ್ಚ ಹಾಗೂ ಇತರ ಆರ್ಥಿಕ ಒತ್ತಡಗಳ ನಡುವೆ ರೈತ-ರಿಗೆ ಹೆಚ್ಚಿನ ದರ ನೀಡುವುದು ಕಷ್ಟವಾಗುತ್ತಿದೆ. ಸರ್ಕಾರದ ನಿರ್ಧಾರಕ್ಕೆ ತಲೆಬಾಗುತ್ತೇನೆ; ಸರ್ಕಾರದ ನಿರ್ಧಾರವೇ ನನ್ನ ನಿರ್ಧಾರ ಎಂದು ಅವರು ಹೇಳಿದರು.

## ಭೀಕರ ಅಗ್ನಿ ಅವಘಡಕ್ಕೆ ಲಕ್ಷಾಂತರ ಮೌಲ್ಯದ ಮಳಿಗೆ ಭಸ್ಮ!




ಅಥಣಿ: ಇಡೀ ಪಟ್ಟಣ ನಿದ್ದೆಯಲ್ಲಿದ್ದಾಗ ಜತ್ ರಸ್ತೆಯಲ್ಲಿ ಭೀಕರ ದುರಂತವೊಂದು ಸಂಭವಿಸಿದೆ. ನಸುಕಿನ 3:30ಕ್ಕೆ ಕಾಣಿಸಿಕೊಂಡ ಒಂದು ಕಿಡಿ, ಕೆಲವೇ ನಿಮಿಷಗಳಲ್ಲಿ ಕೋಟ್ಯಂತರ ಕನಸುಗಳನ್ನು ಸುಟ್ಟು ಬೂದಿ ಮಾಡಿದೆ.

ಪಟ್ಟಣದ ಹೆಸರಾಂತ ಬ್ರಹ್ಮಾ ಎಂಟರ್‌ಪ್ರೈಸಸ್ ಪೀಠೋಪಕರಣ, ಬ್ರಾಂಡೆಡ್ ಬಟ್ಟೆ ಮತ್ತು ಎಲೆಕ್ಟ್ರಾನಿಕ್ ವಸ್ತುಗಳ ದೊಡ್ಡ ಮಳಿಗೆ ಆಕಸ್ಮಿಕ ಬೆಂಕಿಗೆ ಆಹುತಿಯಾಗಿದೆ.

ಏನಾಯಿತು?: ಮಧ್ಯರಾತ್ರಿ ಏಕಾಏಕಿ ಮಳಿಗೆಯೊಳಗಿಂದ ಹೊಗೆ ಕಾಣಿಸಿಕೊಂಡಿದೆ. ನೋಡ ನೋಡುತ್ತಿದ್ದಂತೆ ಬೆಂಕಿಯ ಜ್ವಾಲೆ ಇಡೀ ಅಂಗಡಿಯನ್ನು ಆವರಿಸಿದೆ. ಒಳಗಿದ್ದ ಸೋಫಾ, ಬೆಡ್, ಟಿವಿ, ಫ್ರಿಜ್, ದುಬಾರಿ ಬಟ್ಟೆಗಳು – ಯಾವುದೂ ಉಳಿದಿಲ್ಲ. ಎಲ್ಲವೂ ಕಣ್ಣೆದುರೇ ಸುಟ್ಟು ಕರಕಲಾಗಿದೆ.

ಸದ್ದು ಕೇಳಿ ಓಡಿ ಬಂದ ಸ್ಥಳೀಯರು ನೀರು ಹಾಕಿ ನಂದಿಸಲು ಯತ್ನಿಸಿದರೂ ಬೆಂಕಿಯ ರೌದ್ರಾವತಾರದ ಮುಂದೆ ಅವರ ಪ್ರಯತ್ನ ವಿಫಲವಾಗಿದೆ.

ಅಗ್ನಿಶಾಮಕ ದಳದ ಹರಸಾಹಸ: ಸುದ್ದಿ ತಿಳಿದು ಬಂದ ಅಗ್ನಿಶಾಮಕ ವಾಹನ, ಬೆಂಕಿಯ ತೀವ್ರತೆಗೆ ನೀರು ಸಾಲದೆ ಹಲವು ಬಾರಿ ವಾಪಸ್ ಹೋಗಿ ನೀರು ತುಂಬಿ ತರಬೇಕಾಯಿತು. ಸುಮಾರು 2 ಗಂಟೆಗಳ ಹೋರಾಟದ ನಂತರ ಬೆಂಕಿ ನಿಯಂತ್ರಣಕ್ಕೆ ಬಂದಿದೆ.

ಪ್ರಾಥಮಿಕ ಮಾಹಿತಿ ಪ್ರಕಾರ ರೂ.100 ಲಕ್ಷಕ್ಕೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಬೆಂಕಿಗೆ ನಿಖರ ಕಾರಣ ತಿಳಿದುಬಂದಿಲ್ಲ, ಶಾರ್ಟ್ ಸರ್ಕ್ಯೂಟ್ ನಿಂದಲೇ ಈ ಅವಘಡ ಸಂಭವಿಸಿರಬಹುದು ಎಂದು ಹೇಳಲಾಗುತ್ತಿದೆ.

ಅದೃಷ್ಟವಶಾತ್ ಮಳಿಗೆಯಲ್ಲಿ ಯಾರೂ ಇಲ್ಲದ ಕಾರಣ ಭಾರಿ ಅನಾಹುತ ತಪ್ಪಿದೆ. ಇಲ್ಲದಿದ್ದರೆ ಪರಿಸ್ಥಿತಿ ಇನ್ನೂ ಭೀಕರವಾಗುತ್ತಿತ್ತು.

ಅಥಣಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



# ಕ್ರೀಡಾಪಟು ಸಾಳುಂಕೆ ಗೆ ಸಚಿವ ಎಂ.ಬಿ.ಪಾಟೀಲ ರಿಂದ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ

**ಕಾಮನ್‌ವೆಲ್ತ್ ಕ್ರೀಡಾಕೂಟದ ಪವರ್ ಅಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದ ಬಬಲೇಶ್ವರ ತಾಲೂಕಿನ ತಿಗಣಿ ಬಿದರಿ ಗ್ರಾಮದ ಕ್ರೀಡಾಪಟು ಸಚೀನ ತುಕಾರಾಮ ಸಾಳುಂಕೆ**

ವಿಜಯಪುರ: ಕೆನಡಾದಲ್ಲಿ ಇತ್ತೀಚಿಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಪವರ್ ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದ ಬಬಲೇಶ್ವರ ತಾಲೂಕಿನ ತಿಗಣಿ ಬಿದರಿ ಗ್ರಾಮದ ಕ್ರೀಡಾಪಟು ಸಚೀನ ತುಕಾರಾಮ ಸಾಳುಂಕೆ ಅವರನ್ನು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಇಂದು ರವಿವಾರ ನಗರದಲ್ಲಿ ಆತ್ಮೀಯವಾಗಿ ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಕ್ರೀಡಾಪಟು ಸಚಿನ ತುಕಾರಾಮ ಸಾಳುಂಕೆ ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ ನಮ್ಮ ಜಿಲ್ಲೆ ಹಾಗೂ ಬಬಲೇಶ್ವರದ ಕೀರ್ತಿ ಹೆಚ್ಚಿಸಿದ್ದು ಹೆಮ್ಮೆಯ ಸಂಗತಿಯಾಗಿದೆ. ಚಿಕ್ಕಂದಿನಿಂದಲೇ ಕ್ರೀಡಾ ಕ್ಷೇತ್ರದ ಕಡೆಗೆ ಅತೀವ ಆಸಕ್ತಿ ಹೊಂದಿರುವ ಅವರ ಕುಟುಂಬ ಸದಸ್ಯರು ಕೃಷಿಯನ್ನು ಅವಲಂಬಿಸಿದ್ದಾರೆ. ಅವರ ತಂದೆ ಮತ್ತು ಸಹೋದರ ಈಗಲೂ ಹೊಲದಲ್ಲಿ ಕೆಲಸ ಮಾಡುತ್ತಾರೆ. ಇಂಥ ಗ್ರಾಮೀಣ ಪ್ರತಿಭೆ ಅಂತಾರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದ್ದು, ಒಲಂಪಿಕ್ಸ್‌ನಲ್ಲೂ ಭಾಗವಹಿಸಿ ಚಿನ್ನದ ಪದಕ ಪಡೆಯುವ ಅರ್ಹತೆ ಹೊಂದಿದ್ದಾರೆ. ತುಮಕೂರು ಸಿದ್ದಗಂಗಾ ಮಠದಲ್ಲಿ ಸಿದ್ದಗಂಗೆಯ ಉಚಿತ ಪ್ರಸಾದ ನಿಲಯದಲ್ಲಿ ಇದ್ದು ಪ್ರಾಥಮಿಕ ಹಾಗೂ ಹೈಸ್ಕೂಲ್ ಶಿಕ್ಷಣ ಮುಗಿಸಿ ನಂತರ ಮೂಡಬಿದ–ರಿಯ ಆಳ್ವಾಸ್ ಕಾಲೇಜಿನಲ್ಲಿ ಬಿ.ಎ. ಓದಿ ಈ ಸಾಧನೆ ಮಾಡಿದ್ದಾರೆ ಎಂದು ಹೇಳಿದರು.

ಖಾಸಗಿ ಕಂಪನಿಗಳಾದ ಟೊಯೋಟಾ ಮತ್ತು ಜಿಂದಾಲ್‌ನವರು ಕ್ರೀಡಾಪಟುಗಳಿಗೆ ಉದ್ಯೋಗದ ಜೊತೆಗೆ ತರಬೇತಿಗೆ ಉತ್ತೇಜನ ನೀಡುತ್ತಾರೆ. ಇದರ ಲಾಭ ಪಡೆಯಬಹುದು ಎಂದು ಸಲಹೆ ನೀಡಿದ ಸಚಿವರು, ಕ್ರೀಡಾಪಟು ತಮ್ಮ ಇಚ್ಛೆಯಂತೆ ತಮಗಿಷ್ಟವಾದ ಕ್ಷೇತ್ರದಲ್ಲಿ ಸಾಧನೆ ಮಾಡಲಿ ಎಂದು ಶುಭ ಹಾರೈಸಿದರು.ಸಚೀನ ತುಕಾರಾಮ ಸಾಳುಂಕೆ 105 ಕೆಜಿ ಪುರುಷರ ವಿಭಾಗದಲ್ಲಿ ಸ್ಕ್ವಾಟ್‌ನಲ್ಲಿ 350 ಕೆಜಿ, ಬ್ರೆಂಚ್ ಪ್ರೆಸ್‌ನಲ್ಲಿ 180 ಕೆಜಿ ಹಾಗೂ ಡೆಡ್ ಲಿಫ್ಟ್‌ನಲ್ಲಿ 270 ಕೆಜಿ ತೂಕ ಎತ್ತಿ ದೇಶಕ್ಕೆ ಬೆಳ್ಳಿ ಪದಕ ತಂದಿದ್ದಾರೆ. ಕಳೆದ ಐದು ವರ್ಷಗಳಿಂದ ಬೆಂಗಳೂರು ಮತ್ತಿತರೆಡೆ ಪವರ್ ಲಿಫ್ಟಿಂಗ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

# ಕೃಷ್ಣಾ ನದಿಯಲ್ಲಿ ತೆಪ್ಪಗಳ ಸೆಣಸಾಟಕ್ಕೆ ವೇದಿಕೆ ಸಜ್ಜು!

■ ಉದಯರಶ್ಮಿ ದಿನಪತ್ರಿಕೆ

**ಕೃಷ್ಣಾ ನದಿಯಲ್ಲಿ ಮೂರು ಕಿ.ಮೀ. ತೆಪ್ಪ ಸ್ಪರ್ಧೆ । ವಿಜೇತರಿಗೆ ಆಕರ್ಷಕ ನಗದು ಬಹುಮಾನ । ಅ.22ರಂದು ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಗೃಹ ಕಚೇರಿಯಲ್ಲಿ ಸ್ನೇಹ ಸಮ್ಮಿಲನ**

ಕೊಲ್ಹಾರ: ವಿಜಯದಶಮಿ ಹಬ್ಬದ ಅಂಗವಾಗಿ ಪ್ರತಿವರ್ಷದಂತೆ ಈ ವರ್ಷವೂ ಪಟ್ಟಣದ ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಅವರ ಗೃಹಕಚೇ–ರಿಯಲ್ಲಿ ಅಕ್ಟೋಬರ್ 22ರಂದು ಗುರುವಾರ ಸ್ನೇಹ ಸಮ್ಮಿಲನ ಹಾಗೂ ಬನ್ನಿ ವಿನಿಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಇದೇ ಸಂದರ್ಭದಲ್ಲಿ ಕೃಷ್ಣಾ ನದಿಯಲ್ಲಿ ಅವಳಿ ಜಿಲ್ಲೆಯ ಮೀನುಗಾರರಿಗಾಗಿ ವಿಶೇಷ ತೆಪ್ಪ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಯುವ ಮುಖಂಡರಾದ ಚಂದ್ರಶೇಖರ ಬೆಳ್ಳುಬ್ಬಿ ಹಾಗೂ ಜಗದೀಶ ಸುನಗದ ತಿಳಿಸಿದ್ದಾರೆ.

ಈ ಕುರಿತು ಜಂಟಿ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ವಿಜಯದಶಮಿ ಹಬ್ಬವು ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಬಾಂಧವ್ಯ ವೃದ್ಧಿಸುವ ಸಂಕೇತವಾಗಿದೆ. ಈ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 8 ಗಂಟೆಯಿಂದ ಸಂಜೆಯವರೆಗೆ ವಿಜಯಪುರಬಾಗಲಕೋಟೆ ಅವಳಿ ಜಿಲ್ಲೆಗಳು ಹಾಗೂ ಬಸವನ ಬಾಗೇವಾಡಿ ಮತಕ್ಷೇತ್ರದ ಸಾರ್ವಜನಿಕರು, ಮುಖಂಡರು, ಅಭಿಮಾನಿಗಳು ಪರಸ್ಪರ ಭೇಟಿಯಾಗಿ ಬನ್ನಿ ವಿನಿಮಯ ಮಾಡಿಕೊಳ್ಳುವ ಮೂಲಕ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ಕೃಷ್ಣಾ ನದಿಯಲ್ಲಿ ರೋಚಕ ತೆಪ್ಪ ಸ್ಪರ್ಧೆ:

ವಿಜಯದಶಮಿ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡುವ ಉದ್ದೇಶದಿಂದ ಅಂದು ಬೆಳಗ್ಗೆ 10 ಗಂಟೆಗೆ ಕೊಲ್ಹಾರ ಕೋರ್ತಿ ಸೇತುವೆ ಸಮೀಪದ ಕೃಷ್ಣಾ ನದಿಯಲ್ಲಿ ಮೀನುಗಾರರ ತೆಪ್ಪ ಸ್ಪರ್ಧೆ ಏರ್ಪಡಿಸಲಾಗಿದೆ.

ಟಕ್ಕಳಕಿ ಗ್ರಾಮದ ನದಿದಡದಿಂದ ಕೊಲ್ಹಾರ ಭಾಗದವರೆಗೆ ಸುಮಾರು ಮೂರು ಕಿ.ಮೀ. ದೂರದ ಸ್ಪರ್ಧೆಯಲ್ಲಿ ಪ್ರತಿ ತಂಡದ ಇಬ್ಬರು ಮೀನುಗಾರರು ಸಾಂಪ್ರದಾಯಿಕ ಬುಟ್ಟಿ ತೆಪ್ಪದಲ್ಲಿ ಕುಳಿತು ಹುಟ್ಟು ಹಾಕುತ್ತಾ ನಿಗದಿತ ಗುರಿ ತಲುಪಬೇಕಾಗಿದೆ. ಮೊದಲು ದಡ ಸೇರುವ ತಂಡಗಳ ಆಧಾರದ ಮೇಲೆ ವಿಜೇತರನ್ನು ನಿರ್ಧರಿಸಲಾಗುವುದು ಎಂದು ವಿವರಿಸಿದ್ದಾರೆ.

ಮೀನುಗಾರರ ತೆಪ್ಪ ಸ್ಪರ್ಧೆ

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವ ತಂಡಕ್ಕೆ 15,000, ದ್ವಿತೀಯ ಸ್ಥಾನಕ್ಕೆ 10,000, ತೃತೀಯ ಸ್ಥಾನಕ್ಕೆ 7,500 ಹಾಗೂ ಚತುರ್ಥ ಸ್ಥಾನಕ್ಕೆ 5,000 ನಗದು ಬಹುಮಾನ ನೀಡಲಾಗುವುದು. ಉಳಿದಂತೆ ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲ ತಂಡಗಳಿಗೂ ಸಮಾಧಾನಕರ ಬಹುಮಾನ ವಿತರಿಸಲಾಗುವುದು ಎಂದು ತಿಳಿಸಿದ್ದಾರೆ.

ಮೀನುಗಾರರ ಸಾಂಪ್ರದಾಯಿಕ ಕೌಶಲ, ಸಾಹಸ ಹಾಗೂ ಸ್ಪರ್ಧಾತ್ಮಕ ಮನೋಭಾವಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಸ್ಪರ್ಧೆ ಆಯೋಜಿಸಲಾಗಿದೆ. ಅವಳಿ ಜಿಲ್ಲೆಯ ಮೀನುಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸ್ಪರ್ಧೆಯನ್ನು ಯಶಸ್ವಿಗೊಳಿಸಬೇಕು. ಸಾರ್ವಜನಿಕರು ವಿಜಯದಶಮಿ ಸ್ನೇಹ ಸಮ್ಮಿಲನದಲ್ಲಿ ಪಾಲ್ಗೊಂಡು ಪರಸ್ಪರ ಬನ್ನಿ ವಿನಿಮಯ ಮಾಡಿಕೊಂಡು ಹಬ್ಬದ ಸಂಭ್ರಮವನ್ನು ಹೆಚ್ಚಿಸಬೇಕು ಎಂದು ಚಂದ್ರಶೇಖರ ಬೆಳ್ಳುಬ್ಬಿ ಹಾಗೂ ಜಗದೀಶ ಸುನಗದ ಮನವಿ ಮಾಡಿದ್ದಾರೆ.

# ಬನ್ನಿ ವಿನಿಮಯ ಕಾರ್ಯಕ್ರಮ ಇರುವುದಿಲ್ಲ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ರಾಜ್ಯದಲ್ಲಿ ಬೀಕರ ಬರಗಾಲವಿದ್ದು, ಅದರಲ್ಲೂ ವಿಜಯಪುರ ಜಿಲ್ಲೆಯಲ್ಲಿ ತೀವ್ರ ಬರಗಾಲ ಎದುರಾಗಿರುವುದರಿಂದ ರೈತರ ಸಂಕಷ್ಟದಲ್ಲಿರುವುದನ್ನು ಗಮನದಲ್ಲಿಟ್ಟುಕೊಂಡು ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರ ಸಿಂದಗಿ ರಸ್ತೆಯ ನಿವಾಸದಲ್ಲಿ ಅಕ್ಟೋಬರ್ 22 ರಂದು ಯಾವುದೇ ಸಾರ್ವಜನಿಕ ಬನ್ನಿ ವಿನಿಮಯ ಕಾರ್ಯಕ್ರಮವನ್ನು ಇಟ್ಟುಕೊಂಡಿರುವುದಿಲ್ಲ. ರೈತರು, ಹಿತೈಷಿಗಳು, ಅಭಿ ಮಾನಿಗಳು, ಕಾರ್ಯಕರ್ತರು ಸಹಕರಿಸಬೇಕು ಎಂದು ಶಾಸಕರ ಸಾರ್ವಜನಿಕ ಸಂಪರ್ಕ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಜಯ ಕರ್ನಾಟಕ: 2ನೇ ವಾರ್ಷಿಕೋತ್ಸವ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಜಯ ಕರ್ನಾಟಕ ಸಂಘಟನೆಯ ಎರಡನೆಯ ವಾರ್ಷಿಕೋತ್ಸವ ಇದೇ ದಿ:24 ರಂದು ಶನಿವಾರ ಜರುಗಲಿದೆ.

ಪಟ್ಟಣದ ಸಿಂದಗಿ ರಸ್ತೆಯ ಅವ್ಪೋಗೇಶ್ವರ ಧಾಮದ ಹತ್ತಿರದಲ್ಲಿ ಸ್ಥಳೀಯ ತಪೋಧಾಮದಶ್ರೀ ಸಾನಿಧ್ಯದಲ್ಲಿ ಬೆಳಿಗ್ಗೆ 10 ಗಂಟೆಗೆ ಜರುಗುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಬಿ.ಎನ್.ಜಗದೀಶ ವಹಿಸಲಿದ್ದಾರೆ. ಶಾಸಕ ರಾಜುಗೌಡ ಪಾಟೀಲ (ಕುದರಿಸಾಲವಾಡಗಿ) ಉದ್ಘಾಟನೆಗೊಳಿಸಲಿದ್ದಾರೆ.

ಜಿಲ್ಲಾಧ್ಯಕ್ಷ ಸಂಗಮೇಶ ದಾಸ್ಯಾಳ, ಮಾಜಿಶಾಸಕರುಗಳಾದ ಸೋಮನಗೌಡ ಪಾಟೀಲ(ಸಾಸನೂರ), ಶರಣಪ್ಪ ಸುಣಗಾರ, ಖ್ಯಾತನೇತ್ರ ತಜ್ಞ ಪ್ರಭುಗೌಡ ಲಿಂಗದಳ್ಳಿ(ಚಬನೂರ), ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ರಿಯಾಜ್ ಯಲಗಾರ, ಬಿಜೆಪಿ ಧುರೀಣ ಬಸನಗೌಡ ಪಾಟೀಲ(ಯಡಿಯಾಪೂರ), ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಶೀರ್ ಬೇಪಾರಿ, ಸಹಿತ ಪಟ್ಟಣ ಪಂಚಾಯಿತಿ ಸದಸ್ಯರು ಹಾಗೂ ಪ್ರಮುಖರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಸಂಗ್ರಾಣಿ ಕಲ್ಲು ಹಾಗೂ ಭಾರ ಎತ್ತುವ ಸ್ಪರ್ಧೆಗಳ ವಿಜೇತ–ರಿಗೆ ಬಹುಮಾನ ವಿತರಣೆ ಮಾಡಲಾಗುವುದು ಎಂದು ತಾಲ್ಲೂಕು ಅಧ್ಯಕ್ಷ ಹಸನ್ ನಧಾಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಸತ್ತಿನಲ್ಲಿ ಪ್ರಸ್ತಾಪಿಸಿ, ಪ್ರಧಾನಿಯ ಗಮನಕ್ಕೆ ತರಲು ರಾಜ್ಯಸಭಾ ಸದಸ್ಯ ಗೋಪಿಕೃಷ್ಣ ಪಾಂಡೆಗೆ ಮನವಿ

# 371(ಜೆ) ವ್ಯಾಪ್ತಿಗೆ ವಿಜಯಪುರ ಜಿಲ್ಲೆ ಸೇರ್ಪಡೆಗೆ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನದ 371(ಜೆ) ವಿಧಿಯಡಿ ವಿಶೇಷ ಸ್ಥಾನಮಾನ ಕಲ್ಪಿಸಿ, ವಿಜಯಪುರ ಜಿಲ್ಲೆಯನ್ನು ಮಾತ್ರ ಅದರ ವ್ಯಾಪ್ತಿಯಿಂದ ಹೊರಗಿಟ್ಟಿರುವುದು ಜಿಲ್ಲೆಯ ಲಕ್ಷಾಂತರ ಜನರಿಗೆ ಮಾಡಿದ ಅನ್ಯಾಯವಾಗಿದೆ. ಈ ತಾರತಮ್ಯಕ್ಕೆ ಅಂತ್ಯ ಹಾಡಿ, ವಿಜಯಪುರ ಜಿಲ್ಲೆಯನ್ನು ಸಂಪೂರ್ಣವಾಗಿ 371(ಜೆ) ವ್ಯಾಪ್ತಿಗೆ ಸೇರ್ಪಡೆಗೊಳಿಸಬೇಕೆಂದು ವಿಜಯಪುರ ಜಿಲ್ಲಾ 371(ಜೆ) ಹೋರಾಟ ಸಮಿತಿ ಆಗ್ರಹಿಸಿದೆ.

ಈ ಸಂಬಂಧ ಪಟ್ಟಣದಲ್ಲಿ ನೂತನ ರಾಜ್ಯಸಭಾ ಸದಸ್ಯ ಗೋಪಿಕೃಷ್ಣ ಪಾಂಡೆ ಅವರಿಗೆ ಹೋರಾಟ ಸಮಿತಿ ಮುಖಂಡ ಅನೀಲ ಇಕ್ಕಡೆ ನೇತೃತ್ವದಲ್ಲಿ ಮನವಿ ಸಲ್ಲಿಸಿ, ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಯನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸುವಂತೆ ಒತ್ತಾಯಿಸಲಾಯಿತು.

'ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ದೊರಕಿರುವ 371ಜೆ ಮೀಸಲಾತಿ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಲ್ಲಿ ವಿಶೇಷ ಮೀಸಲಾತಿ, ಯುವಕ–ರಿಗೆ ಸರ್ಕಾರಿ ಉದ್ಯೋಗದಲ್ಲಿ ಆದ್ಯತೆ ಹಾಗೂ ಪ್ರಾದೇಶಿಕ ಅಭಿವೃದ್ಧಿಗೆ ವಿಶೇಷ ಅನುದಾನ ದೊರೆಯುತ್ತಿದೆ. ಆದರೆ, 25 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ವಿಜಯಪುರ ಜಿಲ್ಲೆಯ ಜನತೆ ಇಂತಹ ಅವಕಾಶಗಳಿಂದ ವಂಚಿತರಾಗಿರುವುದು ಸರಿಯಲ್ಲ ಎಂದು ಒತ್ತಾಯಿಸಿದರು.

ವಿಜಯಪುರ ಜಿಲ್ಲೆಯ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿ–ಕ ಅಭಿವೃದ್ಧಿಗೆ 371(ಜೆ) ವಿಶೇಷ ಸ್ಥಾನಮಾನ ಅಗತ್ಯವಾಗಿದೆ. ಇದು ಕೇವಲ ಮೀಸಲಾತಿಯ ಬೇಡಿಕೆಯಲ್ಲ, ಜಿಲ್ಲೆಯ ಯುವಜನರ ಭವಿಷ್ಯ ಹಾಗೂ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ನ್ಯಾಯಯುತ ಹೋರಾಟವಾಗಿದೆ ಎಂದು ಪ್ರತಿಪಾದಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಗಮನಕ್ಕೆ ಈ ವಿಷಯ ತಂದು, ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಅಗತ್ಯ ಪ್ರಸ್ತಾವನೆ ಸಲ್ಲಿಸುವಂತೆ ಕ್ರಮ ವಹಿಸಬೇಕು. ಸಂವಿಧಾನದ 371(ಜೆ) ವಿಧಿಗೆ ಸೂಕ್ತ ತಿದ್ದುಪಡಿ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಮುಂಬರುವ ಸಂಸತ್ ಅಧಿವೇಶನದಲ್ಲಿ ವಿಜಯಪುರ ಜಿಲ್ಲೆಯ ಬೇಡಿಕೆಯನ್ನು ಪ್ರಸ್ತಾಪಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ಮನವಿಗೆ ಸ್ಪಂದಿಸಿದ ರಾಜ್ಯಸಭಾ ಸದಸ್ಯ ಗೋಪಿಕೃಷ್ಣ ಪಾಂಡೆ, ವಿಜಯಪುರ ಜಿಲ್ಲೆಯ ಬೇಡಿಕೆಯನ್ನು ಪ್ರಧಾನಮಂತ್ರಿಗಳ ಗಮನಕ್ಕೆ ತಂದು, ಜಿಲ್ಲೆಯ ಜನರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ, ಬಿಜೆಪಿ ಜಿಲ್ಲಾಧ್ಯಕ್ಷ ಗುರಲಿಂಗಪ್ಪ ಅಂಗಡಿ ಸೇರಿದಂತೆ ಹೋರಾಟ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ತಾನು ರಚಿಸಿದ ಪುಸ್ತಕದಿಂದ ಬಂದಿರುವ ರೂ.10 ಸಾವಿರ ರಾಯಲ್ಟಿ ಹಣವನ್ನು ಸಚಿವರಿಗೆ ಹಸ್ತಾಂತರಿಸಿದ ಶಿವಾನಿ ಬಿರಾದಾರ

# ಬಾಲಪ್ರತಿಭೆ ಶಿವಾನಿಯಿಂದ ವೃಕ್ಷಥಾನ್ ಹೆರಿಟೇಜ್ ರನ್ ಗೆ ದೇಣಿಗೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: 10 ವರ್ಷದ ವಿದ್ಯಾರ್ಥಿನಿಯೊಬ್ಬಳು ತಾನು ರಚಿಸಿದ ಪುಸ್ತಕದಿಂದ ಬಂದಿರುವ ರೂ.10 ಸಾವಿರ ರಾಯಲ್ಟಿ ಹಣವನ್ನು ವೃಕ್ಷಥಾನ್ ಹೆರಿಟೇಜ್ ರನ್ ಗೆ ದೇಣಿಗೆಯಾಗಿ ನೀಡುವ ಮೂಲಕ ಗಮನ ಸೆಳೆದಿದ್ದಾಳೆ.

ವಿಜಯಪುರ ನಗರದ ಬಿ. ಎಲ್. ಡಿ. ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಐಸಿ–ಎಸ್‌ಇ ಶಾಲೆಯ 10 ವರ್ಷದ ಬಾಲಪ್ರತಿಭೆ ಶಿವಾನಿ ಬಿರಾದಾರ ಇಂದು ರವಿವಾರ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರನ್ನು ಭೇಟಿಯಾಗಿ ದೇಣಿಗೆಯ ಚೆಕ್ ನೀಡಿದಳು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ತನ್ನ ಸೃಜನಶೀಲ ಬರವಣಿಗೆಯಿಂದ ಮ್ಯಾಜಿಕ್ ಟೇಲ್ಸ್ ಫಾರ್ ಲಿಟಲ್ ಹಾರ್ಟ್ಸ್(ಒಚಿರುಛಿ ಖಿಚಿಟಥ ಜಿಂಡಿ ಖಣಣಟಜ ಊಚಿಡಿಣ) ಎಂಬ ಪುಸ್ತಕವನ್ನು ರಚಿಸಿ ಅದರಿಂದ ಬಂದ 10,000 ರಾಯಲ್ಟಿ(ಪುಸ್ತಕ ಮಾರಾಟದಿಂದ ಬರುವ ಹಣವನ್ನು ಲೇಖಕರಿಗೆ ನೀಡುವ ಸಂಭಾವನೆ) ಹಣವನ್ನು ಪರಿಸರ ಜಾಗೃತಿಯ ಸಂಕೇತವಾಗಿರುವ ವೃಕ್ಷಥ–ಾನ್ ಹೆರಿಟೇಜ್ ರನ್'ಗೆ ದೇಣಿಗೆಯಾಗಿ ನೀಡಿರುವುದು ಮನದುಂಬಿ ಬಂದಿದೆ. ಕಳೆದ ಎರಡು ವರ್ಷಗಳಿಂದ ವೃಕ್ಷಥಾನ್ ನಲ್ಲಿ ಭಾಗವಹಿಸುತ್ತಿರುವ ಶಿವಾನಿ, ಈ ಕಾರ್ಯಕ್ರಮದ ಆಶಯಗಳಿಂದ ಪ್ರೇ–ರಿತರಾಗಿ ತನ್ನ ಪರಿಶ್ರಮದ ಗಳಿಕೆಯನ್ನು ಪರಿಸರ ಸಂರಕ್ಷಣೆಯ ಕಾರ್ಯಕ್ಕೆ ಸಮರ್ಪಿಸಿರುವುದು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು. ಚಿಕ್ಕ ವಯಸ್ಸಿನಲ್ಲೇ ಈ ಬಾಲಕಿಯಲ್ಲಿ ಅರಳಿರುವ ಸೃಜನಶೀಲತೆ, ಅದಮ್ಯ ಪರಿಶ್ರಮ ಮತ್ತು ಉದಾತ್ತ ಸಾಮಾಜಿಕ ಕಳಕಳಿ ನಿಜಕ್ಕೂ ಪ್ರತಿಯೊಬ್ಬ–ರಿಗೂ ಸ್ಫೂರ್ತಿದಾಯಕವಾಗಿದೆ. ಈ ಬಾಲಕಿಯ ಪ್ರತಿಭೆ, ಪರಿಶ್ರಮ ಮತ್ತು ಉದಾತ್ತ ಮನೋಭಾವಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಶಿವಾನಿಯ ಮುಂದಿನ ಸಾಧನೆಯ ಹಾದಿ ಇನ್ನಷ್ಟು ಯಶಸ್ಸಿನಿಂದ ಕೂಡಿರಲಿ. ಇಂತಹ ಬಾಲಪ್ರತಿಭೆಗಳು ನಮ್ಮ ನಾಡಿನ ಹೆಮ್ಮೆ ಹಾಗೂ ಭವಿಷ್ಯದ ಭರವಸೆ ಮೂಡಿಸಿವೆ ಎಂದು ಸಚಿವರು ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವಿಜಯಪುರ ಸೈಕ್ಲಿಂಗ್ ಗ್ರುಪ್ ಅಧ್ಯಕ್ಷ ಡಾ. ಮಹಾಂತೇಶ ಬಿರಾದಾರ, ವೃಕ್ಷಥಾನ್ ಹೆರಿಟೇಜ್ ರನ್ ಸಮಿತಿ ಖಜಾಂಚಿ ಸಂತೋಷ ಔರಸಂಗ, ಅಗಸ್ತ್ಯ ಫೌಂಡೇಶನ್ ಪ್ರಾದೇಶಿಕ ಮುಖ್ಯಸ್ಥೆ ಗೀತಾ ಮಯೂರ ಪಾಟೀಲ ಉಪಸ್ಥಿತರಿದ್ದರು.

## ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ । ಭಕ್ತರಿಗೆ ಅನ್ನಪ್ರಸಾದ ವ್ಯವಸ್ಥೆ

# ಕೊಲ್ಹಾರದಲ್ಲಿ ಅ.20ರಂದು ಪುರಾಣ ಮಹಾಮಂಗಲ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ವಿಜಯಪುರ ಜಿಲ್ಲೆಯ ಕೃಷ್ಣಾ ನದಿ ತಟದಲ್ಲಿರುವ ಪುಣ್ಯಕ್ಷೇತ್ರ ಕೊಲ್ಹಾರ ಪಟ್ಟಣದ ಶ್ರೀ ಬನಶಂಕರಿ ದೇವಿ ದೇವಸ್ಥಾನದಲ್ಲಿ ನಡೆಯುತ್ತಿರುವ ಶ್ರೀ ಬನಶಂಕರಿ ದೇವಿಯ ಪುರಾಣ ಪ್ರವಚನದ ಮಹಾಮಂಗಲ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಧಾರ್ಮಿಕ ಕಾರ್ಯಕ್ರಮ ಅ.20ರಂದು ಮಂಗಳವಾರ ಬೆಳಗ್ಗೆ 10 ಗಂಟೆಗೆ ಜರುಗಲಿದೆ.

1948ರ ಪರಾಭವ ನಾಮ ಸಂವತ್ಸರದ ಆಶ್ವಿನ ಶುದ್ಧ ಪ್ರತಿಪದೆಯ ಅಂಗವಾಗಿ ಅ.11ರಿಂದ ಆರಂಭಗೊಂಡಿರುವ ಶ್ರೀ ಬನಶಂಕರಿ ದೇವಿಯ ಘಟಸ್ಥಾಪನೆ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮವು ಭಕ್ತಿ, ಶ್ರದ್ಧೆ ಮತ್ತು ಸಡಗರದಿಂದ ನಡೆಯುತ್ತಿದೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಹುಲ್ಯಾಳ ಗ್ರಾಮದ ಪುರಾಣ ಪ್ರವಚನಕಾರ ಶ್ರೀ ಮಲ್ಲೇಶಪ್ಪ ಶರಣ–ರು (ಗೆದ್ದಪ್ಪನವರ) ಅವರಿಂದ ಪ್ರತಿದಿನ ಸಂಜೆ 7ರಿಂದ ರಾತ್ರಿ 9 ಗಂಟೆಯವರೆಗೆ ಶ್ರೀ ಬನಶಂಕರಿ ದೇವಿಯ ಪುರಾಣ ಪ್ರವಚನ ನಡೆಯುತ್ತಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವಿಯ ಮಹಿಮೆ ಹಾಗೂ ಧಾರ್ಮಿಕ ಸಂದೇಶಗಳನ್ನು ಆಲಿಸುತ್ತಿದ್ದಾರೆ.

ಅ.20ರಂದು ಬೆಳಗ್ಗೆ 10 ಗಂಟೆಗೆ ಅಶ್ವಿನ ಶುದ್ಧ ನವಮಿ ಅಂಗವಾಗಿ ದೇವಿಗೆ ವಿಶೇಷ ಪೂಜೆ, ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಪುರಾಣ ಮಹಾಮಂಗಲ ನೆರವೇರಲಿದೆ. ಮಹಿಳೆಯರು ಸಾಂಪ್ರದಾಯಿಕ ಉಡ–ುಗೆಯಲ್ಲಿ ಪಾಲ್ಗೊಂಡು ದೇವಿಗೆ ಪೂಜೆ ಸಲ್ಲಿಸುವ ಮೂಲಕ ಧಾರ್ಮಿಕ ಕಾರ್ಯಕ್ರಮಕ್ಕೆ ಮೆರುಗು ನೀಡಲಿದ್ದಾರೆ.

ಪುರಾಣ ಮಹಾಮಂಗಲದ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಧಾರ್ಮಿಕ ವಿಧಿವಿಧಾನಗಳು ನಡೆಯಲಿದ್ದು, ಆಗಮಿಸುವ ಭಕ್ತಾದಿಗಳಿಗೆ ಅನ್ನಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿದೆ.

ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀ ಬನಶಂಕರಿ ದೇವಿಯ ದರ್ಶನ ಪಡೆದು, ಪುರಾಣ ಮಹಾಮಂಗಲ, ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಅನ್ನಪ್ರಸಾದದಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ವತಿಯಿಂದ ಪ್ರಕಟಣೆಯಲ್ಲಿ ಕೋರಲಾಗಿದೆ.

# ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಪ್ರಧಾನಿ ಮಧ್ಯಸ್ಥಿಕೆ ಅಗತ್ಯ

■ ಉದಯರಶ್ಮಿ ದಿನಪತ್ರಿಕೆ

**ವಿಜಯಪುರದಲ್ಲಿ ಜಿ.ಪಂ. ಮಾಜಿ ಸದಸ್ಯ ಪಂಚಪ್ಪ ಕಲಬುರಗಿ ಒತ್ತಾಯ**

ವಿಜಯಪುರ: ಕಬ್ಬು ಬೆಳೆಗಾರರ ಸಮಸ್ಯೆ ಒಂದು ಗಂಭೀರವಾದ ಸಮಸ್ಯೆ, ಈ ಸಮಸ್ಯೆ ಬಗೆ ಹರಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿಗಳೇ ಮಧ್ಯಸ್ಥಿಕೆ ವಹಿಸಬೇಕು ಎಂದು ರೈತ ಮುಖಂಡ ಪಂಚಪ್ಪ ಕಲಬುರಗಿ ಒತ್ತಾಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂ.ಎಸ್.ಪಿ ಎಂದರೆ ಮಿನಿಮಮ್ ಸಪೋರ್ಟ್ ಪ್ರೈಸ್ ಪರಿಷ್ಕರಣೆಯೇ ಆಗಿಲ್ಲ. ಆದರೆ ಈ ದರ ಕಳೆದ 9 ವರ್ಷಗಳಿಂದ ಈ ದರ ಪರಿಷ್ಕರಣೆಯಾಗಿಲ್ಲ, ಆದ–ರೆ ಈ 9 ವರ್ಷದ ಅವಧಿಯಲ್ಲಿ ಕಬ್ಬು ಉತ್ಪಾದನಾ ವೆಚ್ಚ ಮೂರ್ನಾಲ್ಕು ಪಟ್ಟು ಹೆಚ್ಚಾಗಿದೆ, ಕೃಷಿ ಕಾರ್ಮಿಕರ ವೆಚ್ಚ, ಗೊಬ್ಬರಗಳ ವೆಚ್ಚ, ಪೆಟ್ರೋಲ್ ಡಿಸೈಲ್ ಬೆಲೆ ದುಪ್ಪಟ್ಟಾಗಿದೆ, ಆದರೆ ಇದಕ್ಕೆ ತಕ್ಕಂತೆ ಮಿನಿಮಮ್ ಸಪೋರ್ಟ್ ಪ್ರೈಸ್ ಮಾತ್ರ ಪರಿಷ್ಕರಣೆಯಾಗಿಲ್ಲ. ಕೂಡಲೇ ಪ್ರತಿ ಟನ್ ಕಬ್ಬಿಗೆ 60 ರೂ. ಪರಿಷ್ಕರಣೆ ಮಾಡಬೇಕು ಎಂದರು.

ಕೇಂದ್ರ ಸರ್ಕಾರ ಮಾಡಿರುವ ಅನೇಕ ಬದಲಾವಣೆಗಳು ಕಬ್ಬು ಬೆಳೆಗಾರರಿಗೆ ಮಾರಕವಾಗಿವೆ, ಈ ಹಿಂದೆ ಇದ್ದ ಸರಾಸರಿ ಶೇ.9.5 ಇಳುವರಿಯನ್ನು ಶೇ.10.5 ಏರಿಕೆ ಮಾಡಿದೆ, ಈ ನಿರ್ಧಾರದಿಂದ ರೈತರಿಗೆ ಪ್ರತಿ ಟನ್ ಕಬ್ಬಿಗೆ 200 ರೂ. ನಷ್ಟವಾಗುತ್ತದೆ, ಕಟಾವು ಹಾಗೂ ಸಾಗಾಣಿಕೆ ವೆಚ್ಚ ರೈತರಿಗೆ ಹೊರೆಸಿದೆ ಎಂದರು.

ಇದು ಕರ್ನಾಟಕಕ್ಕೆ ಮಾತ್ರ ಈ ಚಳವಳಿ ಸೀಮಿತವಾಗಿಲ್ಲ, ಇದು ಉತ್ತರ ಪ್ರದೇಶ ಸೇರಿದಂತೆ ಅನೇಕ ರಾಜ್ಯಗಳಿಗೂ ವ್ಯಾಪಿಸಲಿದೆ, ಹೀಗಾಗಿ ಪ್ರಧಾನಿ ಮೋದಿ ಅವರು ಎಚ್ಚೆತ್ತುಕೊಂಡು ಕೂಡಲೇ ಈ ವಿಷಯವಾಗಿ ಮಧ್ಯಸ್ಥಿಕೆ ವಹಿಸಬೇಕು ಎಂದರು.

ಸಕ್ಕರೆ ಕಾರ್ಖಾನೆಗಳು ಸಕ್ಕರೆ ಹೊರತುಪಡಿಸಿ ಉಳಿದ ಉತ್ಪನ್ನಗಳನ್ನು ಸಹ ತಯಾರಿಸುತ್ತದೆ, ಇದಕ್ಕೆ ಸರ್ಕಾರ ಸಹ ತೆರಿಗೆ ವಿಧಿಸುತ್ತದೆ, ಆದರೆ ಇದರ ಮೇಲೆ ರೈತರಿಗೆ ಪಾಲು ಬೇಡವೇ? ಇದು ನ್ಯಾಯವಲ್ಲವೇ? ಎಂದು ಪ್ರಶ್ನಿಸಿದರು.

ಪಕ್ಷದ ಮುಖಂಡರಾದ ರಾಜು ಹಿಪ್ಪರಗಿ, ಎಸ್.ಎಸ್. ಖಾದ್ರಿ ಇನಾಮದಾರ, ಎಸ್.ಬಿ. ಪಾಟೀಲ, ಸಂಜೀವ ಹಿರೇಮಠ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



**ತೆಲಂಗಾಣಕ್ಕೆ ನೀರು ಹರಿಸಲು ಹಿಂಗಾರು ಹಂಗಾಮಿಗೆ ನೀರಿಲ್ಲವೇ?**

ಆಲಮಟ್ಟಿ ಹಾಗೂ ನಾರಾಯಣಪೂರ ಜಲಾಶಯದಲ್ಲಿ ನೀರಿನ ಲಭ್ಯತೆ ಇದ್ದರೂ ಸಹ ಹಿಂಗಾರು ಅವಧಿಗೆ ಹೊಲಗಳಿಗೆ ನೀರು ಹರಿಸುವುದಿಲ್ಲ ಎಂಬ ಐಸಿಸಿ ನಿರ್ಣಯ ಸ್ವೀಕರಿಸಿರುವುದು ಯಾವ ನ್ಯಾಯ? ತೆಲಂಗಾಣದಲ್ಲಿ ನಿಮ್ಮ ಪಕ್ಷದ ಸರ್ಕಾರ ಇರುವುದರಿಂದ ಅವರಿಗೆ ನೀರು ಹರಿಸಲು ನಮ್ಮ ರೈತರಿಗೆ ಮೋಸ ಮಾಡುತ್ತಿದ್ದೀರಾ?

ಜಿಲ್ಲಾ ಪಂಚಾಯತ ಮಾಜಿ ಸದಸ್ಯ ಪಂಚಪ್ಪ ಕಲಬುರಗಿ ಖಾರವಾಗಿ ಪ್ರಶ್ನಿಸಿದರು. ಕಬ್ಬು ಮೊದಲಾದವುಗಳಿಗೆ ಹಿಂಗಾರು ಹಂಗಾಮಿನಲ್ಲಿ ನೀರು ಹರಿಸಿ ಎಂದು ಕೇಳುತ್ತಿಲ್ಲ, ರೈತರು ಮೂರು ಹೊತ್ತಿನ ಊಟ ಮಾಡಲು ಜೋಳ, ಗೋದಿಯಂತಹ ಮೂರು ತಿಂಗಳ ಅಲ್ಪಾವಧಿ ಬೆಳೆಗೆ ನೀರು ಹರಿಸಬೇಕು ಎಂದು ಕೇಳುತ್ತಿದ್ದೇವೆ ಎಂದರು.

ನೀರು ನಿರ್ವಹಣೆ ಸಭೆ ಹಿಂಗಾರು ಹಂಗಾಮಿಗೆ ನೀರು ಕೊಡುವುದಿಲ್ಲ ಎಂಬ ನಿರ್ಣಯ ತೆಗೆದುಕೊಂಡಿದೆ, ಇದು ಅನ್ಯಾಯದ ಪರಮಾವಧಿ, ಕೂಡಲೇ ಇದನ್ನು ವಾಪಸ್ಸು ಪಡೆಯಬೇಕು, ನಿಮಗೆ ನಮ್ಮ ರೈತರು ಬೇಕೋ ಅಥವಾ ನೆರೆಯ ರಾಜ್ಯದ ನಿಮ್ಮ ಪಕ್ಷದ ಕಾರ್ಯಕರ್ತರು ಬೇಕೋ ಎಂದು ಪಂಚಪ್ಪ ಪ್ರಶ್ನಿಸಿದರು.

# ಬದುಕೇ ಒಂದು ಕೇರಂ ಆಟ!

**ನಾವು ಎಷ್ಟೋ ಭೇದಗಳನ್ನು ಮಾಡಿಕೊಂಡಿದ್ದೇವೆ. ಆದರೆ ಬದುಕಿನ ಅಂತಿಮ ಸತ್ಯದ ಮುಂದೆ ಇವೆಲ್ಲವೂ ಹೊರಗಿನ ಗುರುತುಗಳಷ್ಟೇ. ಇಂದು ಒಬ್ಬನಿಗೆ ಸಿಕ್ಕಿರುವ ಸ್ಥಾನ ನಾಳೆ ಮತ್ತೊಬ್ಬನಿಗೆ ಸಿಗಬಹುದು. ಇಂದು ಗೆದ್ದವನು ನಾಳೆ ಸೋಲಬಹುದು. ಇಂದು ಮೇಲಿರುವವನು ನಾಳೆ ಕೆಳಗೆ ಬರಬಹುದು. ಬದುಕಿನ ಆಟದಲ್ಲಿ ಕಾಯಿನ್‌ಗಳ ಬಣ್ಣ ಬದಲಾಗಬಹುದು; ಆದರೆ ಬೋರ್ಡ್ ಒಂದೇ.**




ಪ್ರಶಾಂತ ಕುಲಕರ್ಣಿ
ಉಪನ್ಯಾಸಕರು
ಸಿಂದಗಿ – ವಿಜಯಪುರ

■ ಉದಯರಶ್ಮಿ ದಿನಪತ್ರಿಕೆ

ಕಾಲೇಜಿನಲ್ಲಿ ದಿನವಿಡೀ ತರಗತಿಗಳು, ವಿದ್ಯಾರ್ಥಿಗಳೊಂದಿಗೆ ಪಾಠ, ಪ್ರಶ್ನೆಗಳು, ಉತ್ತರಗಳು, ದಾಖಲೆಗಳ ಕೆಲಸ ಹೀಗೆ ಒಂದರ ಹಿಂದೆ ಒಂದರಂತೆ ಕೆಲಸಗಳು ಸಾಗುತ್ತಿರುತ್ತವೆ. ಕೆಲವೊಮ್ಮೆ ಎಷ್ಟೇ ಬ್ಯುಸಿಯಾಗಿದ್ದರೂ, ನಮ್ಮೊಳಗಿನ ಒತ್ತಡವನ್ನು ಒಂದಷ್ಟು ಕಡಿಮೆ ಮಾಡಿಕೊಳ್ಳಲು ಸಹೋದ್ಯೋಗಿಗಳೊಂದಿಗೆ ಕೆಲವು ಕ್ಷಣಗಳನ್ನು ಹಗುರವಾಗಿ ಕಳೆಯುವುದು ಕೂಡ ಅಗತ್ಯವೆನಿಸುತ್ತದೆ. ಅಂತಹ ಒಂದು ದಿನ, ಕೆಲಸದ ನಡುವೆಯೇ ನನ್ನ ಸಹೋದ್ಯೋಗಿ ಆರ್. ಎ. ಹಾಲಕೇರಿ ಸರ್, "ಸರ್, ಕೇರಂ ಆಡೋಣ" ಎಂದರು. "ಸರಿ ಸರ್" ಎಂದು ನಾನೂ ಅವರ ಜೊತೆ ಕೇರಂ ಬೋರ್ಡಿನ ಮುಂದೆ ಕುಳಿತೆ. ಕೇರಂ ಆಡುವುದು ನನಗೆ ಹೊಸ ಅನುಭವವೇನಲ್ಲ. ಆದರೆ ಆ ದಿನದ ಆಟ ಮಾತ್ರ ನನಗೆ ನಂತರ ಇಷ್ಟು ದೊಡ್ಡ ಚಿಂತನೆಯಾಗಿ ಮಾರ್ಪಾಡುತ್ತದೆ ಎಂದು ಆಗ ನನಗೆ ಗೊತ್ತಿರಲಿಲ್ಲ. ಕೇರಂ ಬೋರ್ಡ್ ಸಿದ್ಧವಾಯಿತು. ಕಾಯಿನ್‌ಗಳನ್ನು ಮಧ್ಯದಲ್ಲಿ ಜೋಡಿಸಲಾಯಿತು. ಯಾರು ಮೊದಲು ಹೊಡೆಯಬೇಕು ಎಂಬ ಸಣ್ಣ ಮಾತುಕತೆ ನಡೆಯಿತು. ನಗುತ್ತಾ, ಮಾತನಾಡುತ್ತಾ ಆಟ ಆರಂಭವಾಯಿತು. ಒಂದು ಹೊಡೆತ, ಒಂದು ಕಾಯಿನ್ ತೂತಿನೊಳಗೆ; ಮತ್ತೊಂದು



ಹೊಡೆತ, ಇನ್ನೊಂದು ಕಾಯಿನ್ ಬೋರ್ಡಿನ ಅಂಚಿಗೆ ಬಡಿದು ಮತ್ತೆ ಮಧ್ಯಕ್ಕೆ. "ಸರ್, ಇದು ಹೀಗೆ ಬೀಳಬೇಕಿತ್ತು ಸ್ವಲ್ಪ ಜೋರಾಗಿ ಹೊಡೆದಿದ್ದರೆ ಹೋಗುತ್ತಿತ್ತು" ಎಂದು ಹಾಲಕೇರಿ ಸರ್ ಹೇಳಿದಾಗ, "ಹೌದು ಸರ್, ಹೊಡೆತ ಸರಿಯಾಗಿದ್ದರೆ ಫಲವೂ ಸರಿಯಾಗಿರುತ್ತದೆ" ಎಂದು ನಾನೂ ನಗುತ್ತಾ ಹೇಳಿದೆ. ಆದರೆ ಆ ಮಾತು ಹೇಳಿದ ಕ್ಷಣವೇ ನನ್ನೊಳಗೆ ಒಂದು ಚಿಂತನೆ ಮೂಡಿತು. ಹೊಡೆತ ಸರಿಯಾಗಿದ್ದರೆ ಫಲವೂ ಸರಿಯಾಗಿರುತ್ತದೆ ಇದು ಕೇವಲ ಕೇರಂ ಆಟದ ಮಾತೇನಾ? ನಮ್ಮ ಬದುಕಿಗೂ ಇದೇ ನಿಯಮ ಅನ್ವಯಿಸುವುದಿಲ್ಲವೇ? ಆಮೇಲೆ ನಾನು ಕೇರಂ ಬೋರ್ಡನ್ನು ಆಟದ ಕಣ್ಣಿನಿಂದ ನೋಡುವುದನ್ನು ಬಿಟ್ಟು ಬದುಕಿನ ಕಣ್ಣಿನಿಂದ ನೋಡಲು ಆರಂಭಿಸಿದೆ. ಕಪ್ಪು ಕಾಯಿನ್‌ಗಳು ಒಂದು ಕಡೆ, ಬಿಳಿ ಕಾಯಿನ್‌ಗಳು ಮತ್ತೊಂದು ಕಡೆ. ಎರಡು ಬಣ್ಣಗಳು. ಆದರೆ ಎರಡೂ ಒಂದೇ ಗಾತ್ರ, ಒಂದೇ ಆಕಾರ, ಒಂದೇ ಬೋರ್ಡಿನ ಮೇಲೆ, ಒಂದೇ ತೂತಿನೊಳಗೆ ಬೀಳಬೇಕಾದವು. ನಮ್ಮ ಬದುಕೂ ಹೀಗೆಯೇ ಅಲ್ಲವೇ? ಕಪ್ಪುಬಿಳಿ, ಗಂಡುಹೆಣ್ಣು, ಬಡವ ಶ್ರೀಮಂತ, ವಿದ್ಯಾವಂತಅವಿದ್ಯಾವಂತ, ದೊಡ್ಡವರುಚಿಕ್ಕವರು ನಾವು ಎಷ್ಟೋ ಭೇದಗಳನ್ನು ಮಾಡಿಕೊಂಡಿದ್ದೇವೆ. ಆದರೆ ಬದುಕಿನ ಅಂತಿಮ ಸತ್ಯದ ಮುಂದೆ ಇವೆಲ್ಲವೂ ಹೊರಗಿನ ಗುರುತುಗಳಷ್ಟೇ.

ಇಂದು ಒಬ್ಬನಿಗೆ ಸಿಕ್ಕಿರುವ ಸ್ಥಾನ ನಾಳೆ ಮತ್ತೊಬ್ಬನಿಗೆ ಸಿಗಬಹುದು. ಇಂದು ಗೆದ್ದವನು ನಾಳೆ ಸೋಲಬಹುದು. ಇಂದು ಮೇಲಿರುವವನು ನಾಳೆ ಕೆಳಗೆ ಬರಬಹುದು. ಬದುಕಿನ ಆಟದಲ್ಲಿ ಕಾಯಿನ್‌ಗಳ ಬಣ್ಣ ಬದಲಾಗಬಹುದು; ಆದರೆ ಬೋರ್ಡ್ ಒಂದೇ. ಹಾಲಕೇರಿ ಸರ್ ಮತ್ತೊಂದು ಕಾಯಿನ್ ಹೊಡೆಯುತ್ತಿದ್ದರು. ನಾನು ಮಾತ್ರ ಒಂಬತ್ತು ಕಾಯಿನ್‌ಗಳನ್ನು ಎಣಿಸುತ್ತಿದ್ದೆ. "ಒಂಬತ್ತೇ ಯಾಕೆ?" ಎಂಬ ಪ್ರಶ್ನೆ ನನ್ನೊಳಗೆ ಮೂಡಿತು. ನಮ್ಮ ಭಾರತೀಯ ಚಿಂತನೆಗೆ ದೇಹವನ್ನು 'ನವದ್ವಾರಪುರ' ಎಂದು ಕರೆಯಲಾಗಿದೆ. ದೇಹಕ್ಕೆ ಒಂಬತ್ತು ದ್ವಾರಗಳಿವೆ ಎಂಬ ಆಧ್ಯಾತ್ಮಿಕ ಕಲ್ಪನೆ ನೆನಪಾಯಿತು. ಹಾಗಾದರೆ ಈ ಒಂಬತ್ತು ಕಾಯಿನ್‌ಗಳಲ್ಲೂ ಒಂದು ಬದುಕಿನ ಸಂಕೇತವನ್ನು ನೋಡಬಹುದಲ್ಲವೇ? ನಮ್ಮ ದೇಹವೆಂಬ ಕೇರಂ ಬೋರ್ಡಿನಲ್ಲಿ ಇಂದ್ರಿಯಗಳೆಂಬ ಕಾಯಿನ್‌ಗಳು. ಅವುಗಳನ್ನು ನಿಯಂತ್ರಿಸುವುದು, ಸರಿಯಾದ ದಿಕ್ಕಿನಲ್ಲಿ ನಡೆಸುವುದುಅದೇ ಬದುಕಿನ ದೊಡ್ಡ ಆಟ. ಅಷ್ಟರಲ್ಲಿ ನನ್ನ ಕಣ್ಣು ಕೆಂಪು ಕಾಯಿನ್‌ನ ಮೇಲೆ ಬಿತ್ತು. ಎಲ್ಲ ಕಾಯಿನ್‌ಗಳ ನಡುವೆ ಅದು ಮಾತ್ರ ವಿಭಿನ್ನ. ಒಂದೇ ಒಂದು ಕೆಂಪು ಕಾಯಿನ್. ಅದು ನನಗೆ ಜೀವದ ಸಂಕೇತದಂತೆ ಕಂಡಿತು. ಕಪ್ಪು ಕಾಯಿನ್ ಆಗಿರಲಿ, ಬಿಳಿ ಕಾಯಿನ್ ಆಗಿರಲಿ, ಹೊರಗಿನ ರೂಪ, ಬಣ್ಣ, ಸ್ಥಾನ, ಲಿಂಗ, ಸಂಪತ್ತು, ಅಧಿಕಾರ ಎಷ್ಟೇ ವ್ಯತ್ಯಾಸಗಳಿರಲಿ, ಎಲ್ಲದರ ಒಳಗಿರುವ ಜೀವ ಒಂದೇ. ಅದಕ್ಕಾಗಿಯೇ ಬಹುಶಃ ಈ ಆಟದಲ್ಲಿ ಕೆಂಪು ಕಾಯಿನ್ ಒಂದೇ. ಎರಡು ಬಣ್ಣಗಳ ಕಾಯಿನ್‌ಗಳು ಅನೇಕ. ಆದರೆ ಜೀವದ ಸಂಕೇತ ಮಾತ್ರ ಒಂದು. ಜೀವವಿಲ್ಲದ ದೇಹಕ್ಕೆ ಎಷ್ಟೇ ಅಲಂಕಾರ ಮಾಡಿದರೂ ಏನು ಪ್ರಯೋಜನ? ಅದೇ ರೀತಿ ಬದುಕಿನಲ್ಲಿ ಎಷ್ಟೇ ಸಂಪಾದನೆ ಮಾಡಿದರೂ, ಒಳಗಿನ ಜೀವದ ನೆಮ್ಮದಿ ಇಲ್ಲದಿದ್ದರೆ



ಆ ಸಂಪಾದನೆಯ ಅರ್ಥವೇನು? ನಾವು ಮನೆ ಕಟ್ಟುತ್ತೇವೆ, ಆಸ್ತಿ ಮಾಡುತ್ತೇವೆ, ಹಣ ಸಂಪಾದಿಸುತ್ತೇವೆ, ಹುದ್ದೆ ಪಡೆಯುತ್ತೇವೆ, ಪ್ರಶಸ್ತಿ ಪಡೆಯುತ್ತೇವೆ, ಸಮಾಜದಲ್ಲಿ ಹೆಸರು ಮಾಡುತ್ತೇವೆ. ಆದರೆ ಒಂದು ದಿನ ನಮ್ಮನ್ನೇ ನಾವು ಕೇಳಿಕೊಳ್ಳಬೇಕಾಗುತ್ತದೆ "ಇವೆಲ್ಲವನ್ನು ಗಳಿಸುವ ಓಟದಲ್ಲಿ ನಾನು ನನ್ನನ್ನೇ ಕಳೆದುಕೊಂಡಿಲ್ಲವೇ?" ಕೇರಂ ಆಟ ಮುಂದುವರಿಯುತ್ತಿತ್ತು. ಹಾಲಕೇರಿ ಸರ್ ಒಂದು ಕಾಯಿನ್‌ಗೆ ಹೊಡೆದರು. ಕಾಯಿನ್ ಅಂಚಿಗೆ ಬಡಿದು ದಿಕ್ಕು ಬದಲಿಸಿತು. ನಮ್ಮ ಬದುಕಿನಲ್ಲೂ ಎಷ್ಟೋ ಬಾರಿ ಹೀಗಾಗುತ್ತದೆ. ನಾವು ಒಂದು ದಾರಿ ಎಂದುಕೊಂಡಿರುತ್ತೇವೆ. ಆದರೆ ಬದುಕು ನಮ್ಮನ್ನು ಇನ್ನೊಂದು ದಿಕ್ಕಿಗೆ ಕೊಂಡೊಯ್ಯುತ್ತದೆ. ನಾವು ಸೋಲು ಎಂದುಕೊಂಡ ಘಟನೆ ಮುಂದೆ ನಮ್ಮ ಬದುಕಿನ ದೊಡ್ಡ ತಿರುವಾಗುತ್ತದೆ. ನಾವು ಕಳೆದುಕೊಂಡ ಅವಕಾಶವೇ ಮತ್ತೊಂದು ದೊಡ್ಡ ಅವಕಾಶಕ್ಕೆ ದಾರಿ ಮಾಡಿಕೊಡುತ್ತದೆ. ಕೆಲವೊಮ್ಮೆ ನಮ್ಮ ಹೊಡೆತ ನೇರವಾಗಿರದಿದ್ದರೂ ಫಲ ನಮ್ಮ ಪರವಾಗಿರುತ್ತದೆ. ಕೇರಂನಲ್ಲಿ ನಾವು ಸ್ಟ್ರೈಕರ್ ಅನ್ನು ಒಂದು ದಿಕ್ಕಿನಲ್ಲಿ ಹೊಡೆಯುತ್ತೇವೆ. ಅದು ಬೋರ್ಡಿನ ಅಂಚಿಗೆ ಬಡಿದು, ಮತ್ತೆ ಹಿಂದಿರುಗಿ ಕಾಯಿನ್‌ಗೆ ತಾಗಿ, ನಿರೀಕ್ಷಿಸದ ತೂತಿನೊಳಗೆ ಕಾಯಿನ್ ಬೀಳಬಹುದು. ಅದು ನನಗೆ ಭಗವತ್ಕೃಪೆಯಂತೆ ಕಾಣುತ್ತದೆ. ನಾವು ಯೋಜನೆ ಮಾಡುತ್ತೇವೆ. ಆದರೆ ಅಂತಿಮ ಫಲವನ್ನು ನಿರ್ಧರಿಸುವ ಶಕ್ತಿ ಸಂಪೂರ್ಣವಾಗಿ ನಮ್ಮ ಕೈಯಲ್ಲಿರುವುದಿಲ್ಲ. ಇಲ್ಲಿ ಸ್ಟ್ರೈಕರ್ ಕೂಡ ನನಗೆ ಒಂದು ದೊಡ್ಡ ಸಂಕೇತವಾಗಿ ಕಾಣಿಸಿತು. ಸ್ಟ್ರೈಕರ್ ಭಗವಂತ. ನಮ್ಮ ಜೀವನದ ಕಾಯಿನ್‌ಗಳನ್ನು ಸರಿಯಾದ ದಿಕ್ಕಿನಲ್ಲಿ ನಡೆಸಲು ಅವನ ಕೃಪೆ ಬೇಕು. ಆದರೆ ಸ್ಟ್ರೈಕರ್ ನಮ್ಮ ಕೈಯಲ್ಲಿದೆ. ಅಂದರೆ ಪ್ರಯತ್ನ ನಮ್ಮದು, ದಿಕ್ಕು ತೋರಿಸುವ ಶಕ್ತಿ ಅವನದು. ಹೊಡೆಯುವವನು ಅವನೇ ಹೊಡೆಸುವುದು ನಮ್ಮಿಂದ. ಹಾಲಕೇರಿ ಸರ್ ಆಟದಲ್ಲಿ ತಲ್ಲೀನರಾಗಿದ್ದರು. ನಾನು ಮಾತ್ರ ಈ ಚಿಂತನೆಯೊಳಗೆ ಇನ್ನಷ್ಟು ಆಳಕ್ಕೆ ಹೋಗುತ್ತಿದ್ದೆ. ಕೇರಂ ಬೋರ್ಡಿನ ನಾಲ್ಕು ಮೂಲೆಯ ತೂತುಗಳು ನನ್ನ ಕಣ್ಣಿಗೆ ಬಿದ್ದವು. ನಮ್ಮ ಬದುಕಿನ ನಾಲ್ಕು ಆಶ್ರಮಗಳು ನೆನಪಿಗೆ ಬಂದವು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ. ಬದುಕಿಗೂ ಒಂದು ಕ್ರಮವಿದೆ. ಕೇರಂನಲ್ಲಿ ಕಾಯಿನ್‌ಗಳನ್ನು ಹಿಮ್ಮುಖವಾಗಿ ಹೊಡೆಯಲು ನಿಯಮ ಅವಕಾಶ ಕೊಡುವುದಿಲ್ಲ. ಬದುಕೂ ಹಾಗೆಯೇ. ಕಳೆದ ಕಾಲಕ್ಕೆ ಹಿಂತಿರುಗಿ ಬದುಕಲು ಸಾಧ್ಯವಿಲ್ಲ. ಮಾಡಿದ ತಪ್ಪನ್ನು ಅಳಿಸಲಾಗುವುದಿಲ್ಲ. ಕಳೆದುಹೋದ ಸಮಯವನ್ನು ಮರಳಿ ತರಲಾಗುವುದಿಲ್ಲ. ಹೇಳಿದ ಮಾತನ್ನು ಹಿಂದಕ್ಕೆ ಪಡೆಯಲಾಗುವುದಿಲ್ಲ. ಆದರೆ ಮುಂದಿನ ಹೊಡೆತವನ್ನು ಸರಿಯಾಗಿ ಹೊಡೆಯಬಹುದು. ಅದೇ ಬದುಕಿನ ಅವಕಾಶ. ಆಟದಲ್ಲಿ ಕೆಲವೊಮ್ಮೆ ಎದುರಾಳಿಯ ಕಾಯಿನ್ ನಮ್ಮ ದಾರಿಗೆ ಅಡ್ಡವಾಗಿ ನಿಂತಿರುತ್ತದೆ. ಅವನನ್ನು ನೇರವಾಗಿ ಹೊಡೆಯಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಪೆನಾಲ್ಟಿ. ಆದರೆ ನಮ್ಮದೇ ಕಾಯಿನ್‌ಗೆ ಹೊಡೆದು, ಅದರ ಮೂಲಕ ಎದುರಾಳಿಯ ಕಾಯಿನ್‌ನ್ನು ಸರಿಸಬಹುದು. ಇದು ಕೂಡ ಬದುಕಿನ ಅದ್ಭುತ ಪಾಠ. ಎದುರಿನವನನ್ನು ಬದಲಾಯಿಸಲು ನಾವು ಯಾವಾಗಲೂ ಸಾಧ್ಯವಿಲ್ಲ. ಆದರೆ ನಮ್ಮನ್ನು ನಾವು ಬದಲಾಯಿಸಿಕೊಂಡರೆ ಪರಿಸ್ಥಿತಿಯೇ ಬದಲಾಗಬಹುದು. ಇತರರನ್ನು ಸರಿಪಡಿಸುವ ಪ್ರಯತ್ನಕ್ಕಿಂತ ಮೊದಲು ನಮ್ಮನ್ನೇ ನಾವು ಸರಿಪಡಿಸಿಕೊಳ್ಳಬೇಕು. ಕೇರಂನಲ್ಲಿ ನಿಯಮ ಮೀರಿ ಎದುರಾಳಿಯ ಕಾಯಿನ್‌ಗೆ ನೇರವಾಗಿ ಹೊಡೆದರೆ ಪೆನಾಲ್ಟಿ. ಒಂದು ಕಾಯಿನ್ ಮರಳಿ ಬೋರ್ಡಿಗೆ ಬರುತ್ತದೆ. ಬದುಕಿನಲ್ಲೂ ತಪ್ಪಿಗೆ ಬೆಲೆ ಇದೆ. ಒಂದು ತಪ್ಪು ಮಾತು ಸಂಬಂಧವನ್ನು ಕಳೆದುಕೊಳ್ಳಿಸಬಹುದು. ಒಂದು ತಪ್ಪು ನಿರ್ಧಾರ ವರ್ಷಗಳ ಪರಿಶ್ರಮವನ್ನು ಹಾಳುಮಾಡಬಹುದು. ಒಂದು ಕ್ಷಣದ ಅವಸರ ಇಡೀ ಬದುಕಿನ ನೆಮ್ಮದಿಯನ್ನು ಕಸಿದುಕೊಳ್ಳಬಹುದು. ಮತ್ತೊಂದು ದೊಡ್ಡ ತಪ್ಪು ಆಟದ ಭರಾಟೆಯಲ್ಲಿ ಸ್ಟ್ರೈಕರ್‌ನ್ನೇ ತೂತಿನೊಳಗೆ ಹಾಕುವುದು. ನಾನು ಹಾಲಕೇರಿ ಸರ್‌ಗೆ ನಗುತ್ತಾ ಹೇಳಿದೆ "ಸರ್, ಕಾಯಿನ್‌ಗಳನ್ನು ಹೊಡೆಯುವ ಭರಾಟೆಯಲ್ಲಿ ಸ್ಟ್ರೈಕರ್‌ನ್ನೇ ಕಳೆದುಕೊಂಡರೆ ಆಟವೇ ನಮ್ಮ ವಿರುದ್ಧವಾಗುತ್ತದೆ!" ಆ ಮಾತು ಹೇಳಿದ ತಕ್ಷಣ ನನಗೆ ಅನಿಸಿತು ನಮ್ಮ ಬದುಕಿನಲ್ಲೂ ಇದೇ ಆಗುತ್ತಿಲ್ಲವೇ? ಹಣದ ಹಿಂದೆ ಓಡುತ್ತಾ ಆರೋಗ್ಯ ಕಳೆದುಕೊಳ್ಳುತ್ತೇವೆ.



ಹೆಸರಿನ ಹಿಂದೆ ಓಡುತ್ತಾ ನೆಮ್ಮದಿ ಕಳೆದುಕೊಳ್ಳುತ್ತೇವೆ. ಎಲ್ಲರನ್ನೂ ಮೆಚ್ಚಿಸಲು ಹೋಗಿ ನಮ್ಮವರನ್ನೇ ಮರೆಯುತ್ತೇವೆ. ಇತರರನ್ನು ಗೆಲ್ಲುವ ಪ್ರಯತ್ನದಲ್ಲಿ ನಮ್ಮನ್ನೇ ನಾವು ಸೋಲಿಸಿಕೊಳ್ಳುತ್ತೇವೆ. ಕೊನೆಗೆ ಒಂದು ದಿನ ಹಿಂದಿರುಗಿ ನೋಡಿದಾಗ"ನಾನು ಬಹಳವನ್ನು ಗೆದ್ದಿದ್ದೇನೆ ಆದರೆ ನನ್ನನ್ನೇ ಕಳೆದುಕೊಂಡಿದ್ದೇನೆ" ಎಂಬ ನೋವು ಉಳಿಯಬಹುದು. ಆ ದಿನದ ಕೇರಂ ಆಟ ಎಷ್ಟು ಹೊತ್ತು ನಡೆಯಿತು ಎಂಬುದು ಈಗ ನೆನಪಿಲ್ಲ. ಯಾರು ಗೆದ್ದರು, ಯಾರು ಸೋತರು ಎಂಬುದೂ ಅಷ್ಟು ಮುಖ್ಯವಾಗಿ ಉಳಿದಿಲ್ಲ. ಆದರೆ ಆ ಆಟ ನನಗೆ ಕಲಿಸಿದ ಪಾಠ ಮಾತ್ರ ಇನ್ನೂ ಮನಸ್ಸಿನಲ್ಲಿ ಉಳಿದಿದೆ. ಬದುಕು ಕೂಡ ಕೇರಂ ಆಟವೇ. ಇಲ್ಲಿ ಕಾಯಿನ್‌ಗಳು ನಮ್ಮ ಇಂದ್ರಿಯಗಳು. ಕೆಂಪು ಕಾಯಿನ್ ನಮ್ಮ ಜೀವ. ಬೋರ್ಡ್ ನಮ್ಮ ಲೋಕ. ಎದುರಾಳಿಗಳು ನಮ್ಮ ಸವಾಲುಗಳು. ಪೆನಾಲ್ಟಿಗಳು ನಮ್ಮ ತಪ್ಪುಗಳ ಪ್ರತಿಫಲ. ನಾಲ್ಕು ತೂತುಗಳು ಬದುಕಿನ ನಾಲ್ಕು ಹಂತಗಳು. ಮತ್ತು ಸ್ಟ್ರೈಕರ್? ಅದು ಭಗವಂತನ ಕೃಪೆ. ನಮ್ಮ ಕೈಯಲ್ಲಿರುವ ಸ್ಟ್ರೈಕರ್‌ನ್ನು ಸರಿಯಾದ ದಿಕ್ಕಿನಲ್ಲಿ ಬಳಸುವ ಜವಾಬ್ದಾರಿ ಮಾತ್ರ ನಮ್ಮದು. ಅವನು ಬುದ್ಧಿ ಕೊಟ್ಟಿದ್ದಾನೆ, ವಿವೇಕ ಕೊಟ್ಟಿದ್ದಾನೆ, ಆಯ್ಕೆ ಮಾಡುವ ಸ್ವಾತಂತ್ರ್ಯ ಕೊಟ್ಟಿದ್ದಾನೆ. ಸರಿಯಾದ ಹೊಡೆತ ಕೊಟ್ಟರೆ ಸರಿಯಾದ ಫಲ ಸಿಗುತ್ತದೆ. ತಪ್ಪಾದ ಹೊಡೆತಕ್ಕೆ ಅದರ ಫಲವನ್ನೂ ನಾವೇ ಅನುಭವಿಸಬೇಕು. ಕೊನೆಗೆ ಆಟ ಮುಗಿಯುತ್ತದೆ. ಕಪ್ಪು ಕಾಯಿನ್‌ಗಳೂ ಉಳಿಯುವುದಿಲ್ಲ. ಬಿಳಿ ಕಾಯಿನ್‌ಗಳೂ ಉಳಿಯುವುದಿಲ್ಲ. ನಮ್ಮದುನಿಮ್ಮದು ಎಂಬ ಭೇದವೂ ಉಳಿಯುವುದಿಲ್ಲ. ಉಳಿಯುವುದು ಒಂದೇ ಜೀವ. ಆಗ ಬಹುಶಃ ನಮಗೆ ಅರ್ಥವಾಗಬಹುದು ಬದುಕು ಗೆಲ್ಲುವುದು ಎಂದರೆ ಎಲ್ಲ ಕಾಯಿನ್‌ಗಳನ್ನು ತೂತಿನೊಳಗೆ ಹಾಕುವುದಲ್ಲ. ನಮ್ಮೊಳಗಿನ ಜೀವವನ್ನು ಕಾಪಾಡಿಕೊಂಡು, ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಕೊನೆಗೆ ಎಲ್ಲವನ್ನೂ ಅವನಿಗೆ ಅರ್ಪಿಸಿಕೊಂಡು ಖಾಲಿಯಾಗುವುದೇ ನಿಜವಾದ ಗೆಲುವು.

ಆರ್. ಎ. ಹಾಲಕೇರಿ ಸರ್ ಜೊತೆ ಆಡಿದ ಆ ಸಾಮಾನ್ಯ ಕೇರಂ ಆಟ ನನ್ನ ಪಾಲಿಗೆ ಸಾಮಾನ್ಯವಾಗಿ ಉಳಿಯಲಿಲ್ಲ. ಒಬ್ಬ ಸಹೋದ್ಯೋಗಿಯೊಂದಿಗೆ ಕೆಲ ಕ್ಷಣಗಳ ಮನರಂಜನೆಗಾಗಿ ಆರಂಭವಾದ ಆಟ ನನ್ನ ಬದುಕನ್ನೇ ನನಗೆ ಅರ್ಥೈಸಿದ ಒಂದು ಮೌನದ ಪಾಠವಾಯಿತು. ಅಂದಿನಿಂದ ಕೇರಂ ಬೋರ್ಡ್ ಕಂಡಾಗ ನನಗೆ ಕೇವಲ ಆಟ ಕಾಣುವುದಿಲ್ಲ. ಬದುಕು ಕಾಣುತ್ತದೆ. ಸ್ಟ್ರೈಕರ್ ಕೈಗೆ ಬಂದಾಗಲೆಲ್ಲಾ ಮನಸ್ಸಿನೊಳಗೆ ಒಂದು ಪ್ರಶ್ನೆ ಕೇಳಿಸುತ್ತದೆ "ಈ ಬದುಕಿನ ಸ್ಟ್ರೈಕರ್ ನನ್ನ ಕೈಯಲ್ಲಿದೆಯೇ.. ಅಥವಾ ಅವನ ಕೈಯಲ್ಲಿದೆಯೇ?"

# ಮಕ್ಕಳ ಕೈಯಲ್ಲಿ ಪುಸ್ತಕವಿರಲಿ, ವ್ಯಸನದತ್ತ ಅವರ ಹೆಜ್ಜೆ ವಾಲದಿರಲಿ

**ಮಕ್ಕಳ ಬದುಕಿನಲ್ಲಿ ಎದುರಾಗುವ ಸಂಕಷ್ಟಗಳನ್ನು ಮೊದಲೇ ಅರಿತು, ಸೂಕ್ತ ನೆರವು ನೀಡಿದರೆ ಅವರ ಭವಿಷ್ಯವನ್ನು ಕಾಪಾಡಬಹುದು. ಆದರೆ ಇಲ್ಲಿ ಕಳೆಯಂತೆ ಕಿತ್ತೆಸೆಯಬೇಕಾದದ್ದು ವ್ಯಸನವೇ ಹೊರತು, ಅದಕ್ಕೆ ಸಿಲುಕಿದ ವ್ಯಕ್ತಿಯಲ್ಲ ಎಂಬ ಅರಿವು ನಮಗಿರಬೇಕು.**

■ ಉದಯರಶ್ಮಿ ದಿನಪತ್ರಿಕೆ

"ಮಗ ಚೆನ್ನಾಗಿ ಓದಿ, ಒಳ್ಳೆಯ ಕೆಲಸ ಹಿಡಿದು, ನೆಮ್ಮದಿಯಾಗಿ ಬದುಕಲಿ" ಎನ್ನುವುದು ಪ್ರತಿಯೊಬ್ಬ ತಂದೆತಾಯಿಯ ಕನಸು. ಅದಕ್ಕಾಗಿ ಹೊಲದಲ್ಲಿ ಬೆವರು ಸುರಿಸುತ್ತಾರೆ, ಕೂಲಿಗೆ ಹೋಗುತ್ತಾರೆ, ಸಾಲ ಮಾಡಿಯಾದರೂ ಮಕ್ಕಳನ್ನು ಶಾಲೆ ಕಾಲೇಜಿಗೆ ಕಳುಹಿಸುತ್ತಾರೆ. ತಾವು ಕಷ್ಟಪಟ್ಟರೂ ಮಕ್ಕಳ ಬದುಕು ಹಸನಾಗಲಿ ಎನ್ನುವ ಆಸೆಯಿಂದ ತಮ್ಮ ಅಗತ್ಯಗಳನ್ನೂ ಮುಂದೂಡುತ್ತಾರೆ.

ಆದರೆ ಇಂತಹ ಕನಸುಗಳ ನಡುವೆ ಮಾದಕವಸ್ತುಗಳ ವ್ಯಸನವೆಂಬ ಕಂಟಕ ಯುವಜನರ ಬದುಕಿಗೆ ನುಸುಳುತ್ತಿರುವುದು ಆತಂಕದ ಸಂಗತಿ. ಮಾದಕವಸ್ತುಗಳ ಜಪ್ತಿ, ಮಾರಾಟಗಾರರ ಬಂಧನದ ಸುದ್ದಿಗಳು ಕೇಳಿಬಂದಾಗ, "ಅದೆಲ್ಲ ದೊಡ್ಡ ಊರಿನವರ ವಿಚಾರ, ನಮ್ಮ ಹಳ್ಳಿಗೆ ಸಂಬಂಧವಿಲ್ಲ" ಎಂದು ಸುಮ್ಮನಾಗುವಂತಿಲ್ಲ. ನಮ್ಮ ಮಕ್ಕಳ ಬದುಕಿನ ಬಗ್ಗೆಯೂ ನಾವು ಎಚ್ಚರ ವಹಿಸಬೇಕಿದೆ.

ಹೊಲದಲ್ಲಿ ಕಳೆ ಬೆಳೆದಾಗಲೇ ಕಿತ್ತುಹಾಕಿದರೆ ಬೆಳೆ ಉಳಿಯುತ್ತದೆ. ಹಾಗೆಯೇ ಮಕ್ಕಳ ಬದುಕಿನಲ್ಲಿ ಎದುರಾಗುವ ಸಂಕಷ್ಟಗಳನ್ನು ಮೊದಲೇ ಅರಿತು, ಸೂಕ್ತ ನೆರವು ನೀಡಿದರೆ ಅವರ ಭವಿಷ್ಯವನ್ನು ಕಾಪಾಡಬಹುದು. ಆದರೆ ಇಲ್ಲಿ ಕಳೆಯಂತೆ ಕಿತ್ತೆಸೆಯಬೇಕಾದದ್ದು ವ್ಯಸನವೇ ಹೊರತು, ಅದಕ್ಕೆ ಸಿಲುಕಿದ ವ್ಯಕ್ತಿಯಲ್ಲ ಎಂಬ ಅರಿವು ನಮಗಿರಬೇಕು.

ಸೌಲಭ್ಯದ ಜೊತೆಗೆ ಮಾತುಕತೆಯೂ ಬೇಕು



ಮಕ್ಕಳಿಗೆ ಪುಸ್ತಕ, ಬಟ್ಟೆ, ಮೊಬೈಲ್, ವಾಹನ, ಖರ್ಚಿಗೆ ಹಣ ಕೊಟ್ಟರೆ ನಮ್ಮ ಕರ್ತವ್ಯ ಮುಗಿಯುವುದಿಲ್ಲ. ಅವರ ಮನಸ್ಸಿನಲ್ಲಿ ಏನಿದೆ, ಓದಿನಲ್ಲಿ ಏನು ಕಷ್ಟವಿದೆ, ಸ್ನೇಹಿತರ ನಡುವೆ ಏನು ನಡೆಯುತ್ತಿದೆ ಎಂಬುದನ್ನೂ ತಿಳಿಯಬೇಕು.

"ಊಟ ಮಾಡಿದೆಯಾ?" ಎಂದು ಕೇಳುವ ಜೊತೆಗೆ, "ಮನಸ್ಸು ಹೇಗಿದೆ? ಏನಾದರೂ ತೊಂದರೆ ಇದೆಯಾ?" ಎಂದೂ ಕೇಳೋಣ. ಮಕ್ಕಳು ತಮ್ಮ ತಪ್ಪನ್ನಾಗಲಿ, ನೋವನ್ನಾಗಲಿ ಹೇಳಿಕೊಳ್ಳಲು ಬಂದಾಗ ತಕ್ಷಣ ಬೈದು ಬಾಯಿ ಮುಚ್ಚಿಸಬಾರದು. ಮೊದಲು ತಾಳ್ಮೆಯಿಂದ ಕೇಳಬೇಕು. ಮನೆಯಲ್ಲಿ ಹೇಳಿಕೊಳ್ಳಲು ಅವಕಾಶವಿದ್ದರೆ, ಕಷ್ಟ ಬಂದಾಗ ನೆರವು ಕೇಳುವ ಧೈರ್ಯ ಅವರಲ್ಲಿ ಬೆಳೆಯುತ್ತದೆ.ಹೊಲದ ಬೆಳೆಗೆ ನೀರು, ಗೊಬ್ಬರದ ಜೊತೆಗೆ ಆರೈಕೆ ಬೇಕಾದಂತೆ, ಮಕ್ಕಳಿಗೂ ಸೌಲಭ್ಯಗಳ ಜೊತೆಗೆ ಪ್ರೀತಿ, ಸಮಯ ಮತ್ತು ಮಾರ್ಗದರ್ಶನ ಬೇಕು.

ಅಂಕಗಳ ಜೊತೆಗೆ ಬದುಕನ್ನೂ ಕಲಿಸೋಣ

ಶಿಕ್ಷಣವೆಂದರೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸುವುದಷ್ಟೇ ಅಲ್ಲ. ಸರಿ ತಪ್ಪನ್ನು ಅರಿಯುವುದು, ಒತ್ತಡವನ್ನು ಎದುರಿಸುವುದು, ತಪ್ಪು ಒತ್ತಾಯಕ್ಕೆ "ಬೇಡ" ಎನ್ನುವುದು ಮತ್ತು ಅಗತ್ಯವಾದಾಗ ನೆರವು ಕೇಳುವುದನ್ನೂ ಕಲಿಯಬೇಕು.

ಶಾಲೆಕಾಲೇಜುಗಳಲ್ಲಿ ಮಾದಕವಸ್ತುಗಳ ವಿರುದ್ಧ ಒಂದು ಭಾಷಣ ಮಾಡಿಸಿ, ಪ್ರತಿಜ್ಞೆ ಹೇಳಿಸಿದರೆ ಕೆಲಸ ಮುಗಿಯುವುದಿಲ್ಲ. ವಿದ್ಯಾರ್ಥಿಗಳೊಂದಿಗೆ ನಿರಂತರ ಮಾತುಕತೆ ನಡೆಯಬೇಕು. ಅವರ



ಆತಂಕಗಳನ್ನು ಆಲಿಸುವ ಶಿಕ್ಷಕರು, ಸೂಕ್ತ ಸಮಾಲೋಚನೆ ಮತ್ತು ನೆರವು ಪಡೆಯುವ ವ್ಯವಸ್ಥೆ ಇರಬೇಕು.

ಕ್ರೀಡೆ, ಸಾಹಿತ್ಯ, ಸಂಗೀತ, ನಾಟಕ ಮತ್ತು ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಅವಕಾಶ ಕಲ್ಪಿಸಬೇಕು. ಪ್ರತಿಯೊಬ್ಬ ಮಗುವಿನಲ್ಲೂ ಒಂದೊಂದು ಸಾಮರ್ಥ್ಯವಿರುತ್ತದೆ. ಅದನ್ನು ಗುರುತಿಸಿ ಬೆಳೆಸುವುದು ಮನೆ ಮತ್ತು ಶಾಲೆಯ ಜಂಟಿ ಜವಾಬ್ದಾರಿ. ಆಟದ ಮೈದಾನದಲ್ಲಿ ಸೋಲು ಗೆಲುವನ್ನು ಎದುರಿಸುವ ಅನುಭವವೂ ಬದುಕಿನ ಸವಾಲುಗಳನ್ನು ಸ್ವೀಕರಿಸಲು ನೆರವಾಗುತ್ತದೆ.

ವ್ಯಸನಕ್ಕೆ ಸಿಲುಕಿದವರನ್ನು ದೂರ ತಳ್ಳಬೇಡಿ

ಮಾದಕವಸ್ತುಗಳ ಬಳಕೆಗೆ ಒಳಗಾದವರನ್ನು ಕಂಡ ತಕ್ಷಣ "ಇವನು ಕೆಟ್ಟವನು", "ಇವಳಿಂದ ಮನೆಯ ಮರ್ಯಾದೆ ಹೋಯಿತು" ಎಂದು ತೀರ್ಪು ನೀಡುವುದು ಸರಿಯಲ್ಲ. ಅವಮಾನಿಸಿ, ಊರೆಲ್ಲ ಸುದ್ದಿ ಮಾಡಿ, ಮನೆಯಿಂದ ದೂರವಿಟ್ಟರೆ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ.

ಅವರಿಗೆ ಅನುಭೂತಿ, ವೈದ್ಯಕೀಯ ನೆರವು, ಸಮಾಲೋಚನೆ ಹಾಗೂ ಅಗತ್ಯಕ್ಕೆ ತಕ್ಕ ಪುನರ್ವಸತಿ ದೊರೆಯಬೇಕು. ಕುಟುಂಬದವರು ವೃತ್ತಿಪರರ ಮಾರ್ಗದರ್ಶನ ಪಡೆದು ಬೆಂಬಲವಾಗಿ ನಿಲ್ಲಬೇಕು. ಚೇತರಿಕೆಯ ಹಾದಿಯಲ್ಲಿ ತಾಳ್ಮೆಯೂ ಬೇಕು.



"ನೀನು ತಪ್ಪು ದಾರಿಯಲ್ಲಿ ಸಿಲುಕಿದ್ದೀಯ; ಹೊರಬರಲು ನಾವು ನಿನ್ನ ಜೊತೆಗಿದ್ದೇವೆ" ಎನ್ನುವ ಮಾತು ಅವರಲ್ಲಿ ಭರವಸೆ ಮೂಡಿಸಬಲ್ಲದು. ನೆರವು ಕೇಳುವುದು ದೌರ್ಬಲ್ಯವಲ್ಲ; ಬದುಕನ್ನು ಸರಿಪಡಿಸಿಕೊಳ್ಳುವ ಧೈರ್ಯ.

ಊರಿನ ಹೊಣೆಗಾರಿಕೆಯೂ ಇದೆ

ಈ ಸಮಸ್ಯೆಯನ್ನು ಪೋಷಕರೊಬ್ಬರ ಹೆಗಲಿಗೋ, ಶಿಕ್ಷಕರೊಬ್ಬರ ಹೆಗಲಿಗೋ ಹಾಕಿ ಉಳಿದವರು ಕೈತೊಳೆದುಕೊಳ್ಳುವಂತಿಲ್ಲ. ಗ್ರಾಮ ಪಂಚಾಯಿತಿ, ಆರೋಗ್ಯ ಸಿಬ್ಬಂದಿ, ಪೊಲೀಸರು, ಶಿಕ್ಷಣ ಸಂಸ್ಥೆಗಳು ಮತ್ತು ಯುವಕ ಸಂಘಗಳು ಒಟ್ಟಾಗಿ ಕೆಲಸ ಮಾಡಬೇಕು.

ಮಾದಕವಸ್ತು ಮಾರಾಟದ ಬಗ್ಗೆ ಅನುಮಾನ ಬಂದರೆ ಊಹಾಪೋಹ ಹರಡುವುದಕ್ಕಿಂತ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಅಕ್ರಮ ವ್ಯಾಪಾರದ ಜಾಲಗಳ ವಿರುದ್ಧ ಕಾನೂನು ಕ್ರಮ ನಡೆಯಬೇಕು. ಜೊತೆಗೆ ನೆರವು ಬೇಕಿರುವವರಿಗೆ ಚಿಕಿತ್ಸೆ ಮತ್ತು ಸಮಾಲೋಚನೆ ಸುಲಭವಾಗಿ ದೊರೆಯುವಂತಾಗಬೇಕು.

ಯುವಜನರಿಗೆ ಆಡಲು ಮೈದಾನ, ಓದಲು ಗ್ರಂಥಾಲಯ, ತಮ್ಮ ಪ್ರತಿಭೆ ತೋರಿಸಲು ವೇದಿಕೆ ಹಾಗೂ ಉದ್ಯೋಗದ ದಾರಿ ತಿಳಿಸುವ ಮಾರ್ಗದರ್ಶನವೂ ಅಗತ್ಯ. "ಕೆಟ್ಟ ದಾರಿಗೆ ಹೋಗಬೇಡಿ" ಎನ್ನುವ ನಾವು, ಒಳ್ಳೆಯ ದಾರಿಯಲ್ಲಿ ನಡೆಯಲು ಅವಕಾಶಗಳನ್ನೂ ಕಲ್ಪಿಸಬೇಕು.

ಮಕ್ಕಳು ಮನೆಯ ಆಸ್ತಿ ಮಾತ್ರವಲ್ಲ; ಊರಿನ ಭವಿಷ್ಯವೂ ಹೌದು. ಅವರ ಕೈಯಲ್ಲಿ ಪುಸ್ತಕವಿರಲಿ, ಮೈದಾನದಲ್ಲಿ ಆಟವಿರಲಿ,



ಮನಸ್ಸಿನಲ್ಲಿ ಕನಸಿರಲಿ. ಸಂಕಷ್ಟ ಬಂದಾಗ ಹೇಳಿಕೊಳ್ಳಲು ನಮ್ಮ ಪ್ರೀತಿಯ ಆಸರೆಯಿರಲಿ. ನಮ್ಮ ಮಕ್ಕಳನ್ನು ಕಾಪಾಡುವ ಕೆಲಸ ಮನೆಯ ಮಾತುಕತೆಯಿಂದ ಆರಂಭವಾಗಿ, ಇಡೀ ಸಮಾಜದ ಕಾಳಜಿಯಾಗಿ ಬೆಳೆಯಲಿ.

ಲೇಖನ
– ಸಿದ್ಧಲಿಂಗ ಚೌಧರಿ.
ಶಿಕ್ಷಕರು, ಸಿಂದಗಿ
ವಿಜಯಪುರ ಜಿಲ್ಲೆ



# ಅ.22 ರಂದು ಬನ್ನಿ ವಿನಿಮಯ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಪ್ರತಿ ವರ್ಷದಂತೆ ಈ ವರ್ಷವು ವಿಜಯದಶಮಿ ಅಂಗವಾಗಿ ಮತಕ್ಷೇತ್ರದ ಮಾಜಿಶಾಸಕ ಸೋಮನಗೌಡ ಪಾಟೀಲ(ಸಾಸನೂರ) ಅವರ ಸಾರ್ವಜನಿಕ ಸೌಹಾರ್ದ ಬನ್ನಿ ವಿನಿಮಯ ಕಾರ್ಯಕ್ರಮ ದಿ: 22 ರಂದು ಗುರುವಾರ ಜರುಗಲಿದೆ.

ವಿಜಯಪುರ ನಗರದ ಬಾಗಲಕೋಟ ರಸ್ತೆಯಲ್ಲಿನ ಬಸವನಗರದ ಸ್ವಗೃಹದಲ್ಲಿ ಜರಗುವ ಬನ್ನಿ ವಿನಿಮಯ ಕಾರ್ಯ ಕ್ರಮದಲ್ಲಿ ಕಾರ್ಯ ಕರ್ತರು, ಹಿತೈಷಿ ಗಳು, ಕ್ಷೇತ್ರದ ಹಿರಿಯರು, ಧುರೀಣರು ಭಾಗವ ಹಿಸಲಿದ್ದಾರೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಅವ್ವಣ್ಣ ಗ್ವಾತಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮನೆ ತೋಟ ಸ್ಪರ್ಧೆ: ಅರ್ಜಿ ಸಲ್ಲಿಕೆ ಅವಧಿ ನ.1 ವರೆಗೆ ವಿಸ್ತರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದಲ್ಲಿ ಡಿಸೆಂಬರ್ 13 ರಂದು ನಡೆಯಲಿರುವ 'ವೃಕ್ಷಥಾನ್ ಹೆರಿಟೇಜ್ ರನ್' ನಿಮಿತ್ತ ಏರ್ಪಡಿಸಲಾಗಿರುವ ಮನೆ ತೋಟ ಸ್ಪರ್ಧೆಗೆ ವಿಡಿಯೋ (ರೀಲ್ಸ್) ಅಪ್‌ಲೋಡ್ ಮಾಡಲು ಕೊನೆಯ ದಿನಾಂಕವನ್ನು ಅಕ್ಟೋಬರ್ 18 ರ ಬದಲಾಗಿ ನವೆಂಬರ್ 1 ರವರೆಗೆ ವಿಸ್ತ–ರಿಸಲಾಗಿದೆ.

ಈ ಸ್ಪರ್ಧೆಯನ್ನು ನಿವೇಶನ ವಿಸ್ತೀರ್ಣ ಅನುಗುಣವಾಗಿ ಎರಡು ವಿಭಾಗಗಳಲ್ಲಿ ಏರ್ಪಡಿಸಲಾಗಿದೆ. ಗಿಡ–ಮರಗಳು, ಹೂ–ಹಸಿರು ಬಳ್ಳಿಗಳು ಹಾಗೂ ಹಸಿರು ಹೊದಿಕೆ ಹೆಚ್ಚಿಸುವ ಕ್ರಮಗಳನ್ನು ಅನುಸರಿಸಿದವರೆಲ್ಲರೂ ತಮ್ಮ ಕೈತೋಟದ ರೀಲ್ಸ್ (ವಿಡಿಯೋ) ಮಾಡಿ, ವಿಸ್ತ–ರಿಸಲಾದ ನಿಗದಿತ ನವೆಂಬರ್ 1 ರ ಸಂಜೆ 5ಗಂ. ವರೆಗೆ ಈ ಕೆಳಗೆ ನೀಡಿರುವ ಸಂಪರ್ಕ ಬಳಸಿ ಅರ್ಜಿಯನ್ನು ಸಲ್ಲಿಸಬೇಕು: ಸಂಗಮೇಶ ಹಾವರಗಿ: 9448360474, ವಿಜಯಕುಮಾರ ಕೋರೆ: 7795172166, ಶಿವು ಕುಂಬಾರ: 9972795289

# ಮಾಹಿತಿ ಹಕ್ಕು ಕಾಯ್ದೆ ಉಲ್ಲಂಘನೆಗೆ 5,000 ದಂಡ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿದಾರರಿಗೆ ನಿಗದಿತ ಅವಧಿಯಲ್ಲಿ ಮಾಹಿತಿ ಒದಗಿಸದಿರುವುದು ಹಾಗೂ ಮಾಹಿತಿ ಆಯೋಗದ ಆದೇಶಗಳನ್ನು ಪಾಲಿಸದ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ್ ಅವರಿಗೆ ಕರ್ನಾಟಕ ಮಾಹಿತಿ ಆಯೋಗ 5,000 ದಂಡ ವಿಧಿಸಿದೆ ಎಂದು ಅರ್ಜಿದಾರ ಅಜೀತ ಎಸ್. ಕಾಂಬಳೆ ತಿಳಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಆಯೋಗವು ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 20(1)ರ ಅಡಿಯಲ್ಲಿ ದಂಡ ವಿಧಿಸಿ ಆದೇಶ ಹೊರಡಿಸಿದೆ ಎಂದು ತಿಳಿಸಿದರು. ಮಾಹಿತಿ ಕೋರಿ ಅರ್ಜಿ ಸಲ್ಲಿಸಿದರೂ ನಿಗದಿತ ಅವಧಿಯಲ್ಲಿ ಮಾಹಿತಿ ದೊರೆಯದ ಹಿನ್ನೆಲೆಯಲ್ಲಿ ಮೇಲ್ಮನವಿ ಸಲ್ಲಿಸಬೇಕಾಯಿತು ಎಂದು ಹೇಳಿದರು.



# ತಂದೆ ತಾಯಿಗೆ ದ್ರೋಹ ಬಗೆಯಬೇಡಿ :ಮಹಾಂತ ಶ್ರೀ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ತಂದೆ ತಾಯಿಗಳಿಗೆ ದ್ರೋಹ ಮಾಡದಂತೆ, ನೋವು ನೀಡದಂತೆ ಇರುತ್ತೇವೆ, ಅವರಿಗೆ ಸಂಕಟ ಬಾರದಂತೆ ನೋಡಿಕೊಂಡು ಹೋಗುತ್ತೇವೆ ಎಂದು ಸಂಕಲ್ಪ ಮಾಡಿ ಎಂದು ಚಿನ್ಮಯಗಿರಿಯ ಮಹಾಂತೇಶ್ವರ ಮಠದ ವೀರಮಹಾಂತ ಶಿವಾಚಾರ್ಯರು ಹೇಳಿದರು.

ಅವರು ತಾಲೂಕಿನ ದೇವಣಗಾಂವ ಗ್ರಾಮದಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಮಹಾಲಕ್ಷ್ಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿರುವ ದೇವಿ ಪುರಾಣ ಕಾರ್ಯಕ್ರಮದಲ್ಲಿ ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಹಸ್ರಾರು ಸಂಖ್ಯೆಯಲ್ಲಿ ಮುತ್ತೈದೆಯರು ಉಡಿ ತುಂಬಿಸಿಕೊಂಡು ದೇವಿಯ ಕೃಪೆಗೆ ಪಾತ್ರರಾದರು. ಪುರಾಣಿಕರಾಗಿ ಆಗಮಿಸಿದ ವೇ. ಮಡಿವಾಳಯ್ಯ ಶಾಸ್ತ್ರಿಗಳು ಗದ್ದಿಗೆಮಠ ಜೇರಟಗಿ, ಸಂಗೀತ ಸೇವೆಯನ್ನು ಯಶವಂತ ಬಡಿಗೇರ ಸಿಂದಗಿ, ತಬಲಾವಾದಕರಾಗಿ ರಾಜಶೇಖರ ಕಟ್ಟಿಸಂಗಾವಿ, ನಂದಿ ಸೇವೆಯನ್ನು ಶರಣಪ್ಪ ಗಂಗನಳ್ಳಿ ಮಾಡಿದರು.



# ಎಂ.ಎಸ್.ಖೇಡ ಆದರ್ಶ ಜೀವನ ನಮಗೆಲ್ಲ ಮಾದರಿ :ಇಂಗಳೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಂ ಎಸ್ ಖೇಡ ಅವರ 10 ನೇ ಪುಣ್ಯಸ್ಮರಣೆ ಕಾರ್ಯಕ್ರಮ ಸೋಮವಾರ ಖೇಡ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಇತಿಹಾಸ ಸಂಶೋಧಕ ಲಾಯಪ್ಪ ಇಂಗಳೆ ಮಾತನಾಡಿ, ಎಂ ಎಸ್ ಖೇಡ ಅವರು ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬಡ, ದೀನ ದುರ್ಬಲ, ಮತ್ತು ಅಂಗವಿಕಲರಿಗೆ ಶಿಕ್ಷಣ ಕೊಟ್ಟು ಬದುಕು ಕಟ್ಟಿಕೊಟ್ಟಿದ್ದಾರೆ. ಅವರ ಆದರ್ಶಯುತ ಜೀವನ ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದು ಹೇಳಿದರು. ಹೋರಾಟಗಾರ ಅನಿಲ ಇಕ್ಕಡೆ ಮಾತನಾಡಿ, ಎಂ ಎಸ್ ಖೇಡ ಅವರು ದೈಹಿಕವಾಗಿ ಅಂಗವಿಕಲರಾಗಿದ್ದರೆ ಹೊರತು ಮಾನಸಿಕವಾಗಿ ಅತ್ಯಂತ ಸದೃಢ ವ್ಯಕ್ತಿಯಾಗಿದ್ದರು ಎಂದು ಹೇಳಿದರು.ಬಿಜಾಪುರ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆಯ ಖಜಾಂಚಿ ವಿನೋದ ಎಮ್ ಖೇಡ ಪ್ರಾಸ್ತಾವಿಕ ಮಾತನಾಡಿದರು.

ಬಿಜಾಪುರ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ವಿಕಾಸ ಎಮ್ ಖೇಡ, ಮಾತೋಶ್ರೀ ಅಂಬವ್ವ ಖೇಡ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ ವಿಜಯ, ಲಕ್ಷ್ಮಿ ಹಿಪ್ಪರಗಿ, ಪ್ರಕಾಶ ರುದ್ರಮನಿ, ಅಪ್ಪು ಇಂಡಿ ಅಶೋಕ ವಾಲಿಕಾರ, ಎಂ ಬಿ ಉಮರಾಣಿ ಅಂಬಣ್ಣ ಗೊನ್ನಾಪುರ, ಸೀತಾ ಲಮಾಣಿ, ಗೌರು ಉದಂಡೆ, ಶಂಕ್ರಮ್ಮ ಕೋರಿ, ಸಂತೋಷ ಕಲಗುಡಿ, ಎಂ ಎಸ್ ಮಠ. ಅನಿಲ್ ಪವಾರ, ರಾಜು ತಡಲಗಿ, ರಾಜು ಕುಮಟಗಿ ಭಗವಾನ ಸೇರಿದಂತೆ ಹಲವರಿದ್ದರು.

### ವಿಜಯಪುರ ಪೊಲೀಸರ ಭರ್ಜರಿ ಕಾರ್ಯಾಚರಣೆ । ದಿಂಡವಾರದ ತೊಗರಿ ಬೆಳೆ ಮಧ್ಯದಲ್ಲಿ ಬೆಳೆದ ಗಾಂಜಾ ಗಿಡಗಳು

# 1 ಕೋಟಿ ರೂ.ಗೂ ಅಧಿಕ ಮೌಲ್ಯದ ಗಾಂಜಾ ಜಪ್ತು!

■ ಉದಯರಶ್ಮಿ ದಿನಪತ್ರಿಕೆ





ವಿಜಯಪುರ: ನಗರದಲ್ಲಿ ಮಾದಕ ದ್ರವ್ಯಗಳ ವಿರುದ್ಧ ಸಮರ ಸಾರಿರುವ ವಿಜಯಪುರ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಬಸವನ ಬಾಗೇವಾಡಿ ತಾಲೂಕಿನ ದಿಂಡವಾರದ ಹೊಲವೊಂದರಲ್ಲಿ ಬೆಳೆಯಲಾಗಿದ್ದ 1 ಕೋಟಿ ರೂ.ಗೂ ಅಧಿಕ ಮೌಲ್ಯದ 200 ಕೆಜಿಗೂ ಅಧಿಕ ಗಾಂಜಾ ಜಪ್ತು ಮಾಡಿಕೊಂಡಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಬಂಧಿಸಿದ್ದಾರೆ.

ಬಂಧಿತ ಆರೋಪಿಯನ್ನು ಶಿವಶಂಕರ್ ಶರಣಪ್ಪ ಜೀರ್ ಎಂದು ಗುರುತಿಸಲಾಗಿದೆ. ಆರೋಪಿ ತನ್ನ ಹೊಲದಲ್ಲಿ ತೊಗರಿ ಬೆಳೆ ಬಿತ್ತನೆ ಮಾಡಿ ಅದರ ಮಧ್ಯದಲ್ಲಿ 500 ಕ್ಕೂ ಹೆಚ್ಚು ಗಾಂಜಾ ಗಿಡಗಳನ್ನು ಬೆಳೆದಿರುವ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದು, ದಾಳಿ ವೇಳೆ 500 ಕ್ಕಿಂತಲೂ ಹೆಚ್ಚು ಗಾಂಜಾ ಗಿಡಗಳನ್ನು ಬೆಳೆಸಿದ್ದು ಕಂಡು ಬಂದಿದ್ದು, 1.1 ಕೋಟಿ ರೂ. ಮೌಲ್ಯದ ಗಾಂಜಾ ಜಪ್ತು ಮಾಡಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಣೆ ನೀಡಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ,

ಎನ್‌ಡಿಪಿಎಸ್ ಕಾಯ್ದೆ ನಿಯಮಗಳ ಪ್ರಕಾರ ದಾಳಿ ಪ್ರಕ್ರಿಯೆ ಕೈಕೊಂಡು ಆರೋಪಿತನಿಂದ ಈ ಕೆಳಗಿನ ಮೌಲ್ಯದ ಅಕ್ರಮ 'ಗಾಂಜಾ' ಬೆಳೆ ಜಪ್ತು ಮಾಡಿಕೊಳ್ಳಲಾಗಿದೆ. 'ದಿಂಡವಾರ' ಗ್ರಾಮದಲ್ಲಿ ಗಾಂಜಾ ಬೆಳೆದಿರುವ ಮಾಹಿತಿ ಬೀಟ್ ಪೊಲೀಸ್ ಸಿಬ್ಬಂದಿಗೆ ಸ್ವೀಕೃತವಾಗಿ–ತ್ತು, ಇದನ್ನು ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ.

ಈ ಪ್ರಕರಣವನ್ನು ಬೇಧಿಸುವ ನಿಟ್ಟನಲ್ಲಿ ಬಸವನ ಬಾಗೇವಾಡಿ ಡಿವೈಎಸ್‌ಪಿ ಚಂದ್ರಕಾಂತ ನಂದರೆಡ್ಡಿ, ಗುರುಶಾಂತ ದಾಶ್ಯಾಳ ಅವರನ್ನೊಳಗೊಂಡ ತಂಡ ಯಶಸ್ವಿಯಾಗಿದ್ದು, ಈ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗಳ ಕಾರ್ಯವನ್ನು ಶ್ಲಾಘಿಸಿ ಬಹುಮಾನವನ್ನು ಘೋಷಿಸಲಾಗಿದೆ ಎಂದರು.

### ಸಪ್ಲೈ ಚೈನ್‌ಗೆ ಕತ್ತರಿ ಗಾಂಜಾ ಬಗ್ಗೆ ಗೌಪ್ಯ ಮಾಹಿತಿ ನೀಡಿ'

ಮಾದಕ ದ್ರವ್ಯಗಳ ಮಾರಾಟ ಜಾಲವನ್ನೇ ಸಂಪೂರ್ಣವಾಗಿ ಮಟ್ಟ ಹಾಕುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಗಂಭೀರವಾದ ಹೆಜ್ಜೆ ಇರಿಸುತ್ತದೆ, ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬೀಟ್ ಮಟ್ಟದಲ್ಲಿಯೂ ಬೀಟ್ ಸಿಬ್ಬಂದಿಗಳ ಮುಖಾಂತರ ಮಾದಕ ದ್ರವ್ಯಗಳ ತಯಾರಿಕೆ, ಮಾರಾಟ ಹಾಗೂ ಬಳಕೆ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ. ವಿಜಯಪುರ ಜಿಲ್ಲೆಯಲ್ಲಿ ಮಾದಕ ವಸ್ತುಗಳ ತಯಾರಿಕೆ, ಮಾರಾಟ ಹಾಗೂ ಬಳಕೆಯ ಬಗ್ಗೆ ಸಾರ್ವಜನಿಕರ ಬಳಿ ಮಾಹಿತಿ ಇದ್ದರೆ ಅದನ್ನು ಇಲಾಖೆಗೆ ಒದಗಿಸಬೇಕು, ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿ ಇರಿಸಲಾಗುವುದು, ಯೋಗ್ಯ ಬಹುಮಾನ ಸಹ ಇಲಾಖೆ ನೀಡಲಿದೆ ಎಂದು ಎಸ್.ಪಿ. ಲಕ್ಷ್ಮಣ ನಿಂಬರಗಿ ತಿಳಿಸಿದರು.

### ಮೈಸೂರು ದಸರಾದಲ್ಲಿ ಸಿಎಂ ಕಪ್ ಬಿಲ್ಲುಗಾರಿಕೆ ಪಂದ್ಯಾವಳಿಯಲ್ಲಿ ಚಿನ್ನ ಮತ್ತು ಇತರ ಸ್ಪರ್ಧೆಗಳಲ್ಲಿ ಬೆಳ್ಳಿ ಪದಕ ಗೆದ್ದ ಬಿಲ್ಲುಗಾರ್ತಿ ದೇವಮ್ಮ ಮಾನಪ್ಪ

# ಸಚಿವ ಎಂ.ಬಿ.ಪಾಟೀಲರಿಗೆ ಕೃತಜ್ಞತೆ ಸಲ್ಲಿಸಿದ ಬಿಲ್ಲುಗಾರ್ತಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮೈಸೂರು ದಸರಾದಲ್ಲಿ ಸಿಎಂ ಕಪ್ ಬಿಲ್ಲುಗಾರಿಕೆ ಪಂದ್ಯಾವಳಿಯಲ್ಲಿ ಚಿನ್ನ ಮತ್ತು ಇತರ ಸ್ಪರ್ಧೆಗಳಲ್ಲಿ ಬೆಳ್ಳಿ ಪದಕ ಗೆದ್ದ ಬಿಲ್ಲುಗಾರ್ತಿ ತನ್ನ ಸಾಧನೆಗೆ ಕಾರಣರಾದ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದ ಹೃದಯಸ್ಪರ್ಷಿ ಘಟನೆ ಸೋಮವಾರ ನಡೆಯಿತು.

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ದೇವಿಪುರ ಗ್ರಾಮದ ಬಡ ಕುಟುಂಬದ ದೇವಮ್ಮ ಮಾನಪ್ಪ ಎನ್ನುವ ಯುವತಿ ದ್ವಿತೀಯ ಪಿಯುಸಿ ಓದುತ್ತಿದ್ದು, ಬಿಲ್ಲುಗಾ–ರಿಕೆಯಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾಳೆ. ಆದ–'ರೆ, ಆಕೆಗೆ, ಬಿಲ್ಲು, ಬಾಣ ಕ್ರೀಡಾ ಸಲಕರಣೆ ಖರೀದಿಲು ಆರ್ಥಿಕ ಸಮಸ್ಯೆ ಎದುರಾಗಿತ್ತು. ಈ ವಿಷಯ ತಿಳಿದ ಸಚಿವ ಎಂ. ಬಿ. ಪಾಟೀಲ ಅವರು, ಯವತಿಗೆ ಕಳೆದ ವರ್ಷ ಸಿಎಸ್‌ಆರ್ ಫಂಡ್‌ನಲ್ಲಿ ರೂ. 3.50 ಲಕ್ಷ ಹಣ–ಕಾಸಿನ ನೆರವು ನೀಡಿ ಬಿಲ್ಲುಗಾರಿಕೆ ಕಿಟ್ ಒದಗಿಸಿದ್ದರು.

ಹೊಸ ಬಿಲ್ಲು, ಬಾಣ ಗಳೊಂದಿಗೆ ತನ್ನ ಗು–ರಿಯತ್ತ ಮುನ್ನುಗ್ಗಿದ ಯುವತಿ ಮೈಸೂರು ದಸರಾದಲ್ಲಿ ಬಿಲ್ಲಗಾರಿಕೆಯಲ್ಲಿ ಚಿನ್ನದ ಪದಕ ಪಡೆದಿದ್ದಾಳೆ. ಅಲ್ಲದೇ, ಹಲವು ರಾಜ್ಯ, ರಾಷ್ಟ್ರದ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗಿಯಾಗಿ ಅನೇಕ ಪದಕಗಳನ್ನು ಗೆದ್ದಿದ್ದಾಳೆ. ಈ ಸಂತಸವನ್ನು ಹಂಚಿಕೊಳ್ಳಲು ಪ್ರತಿಭಾವಂತ ಬಿಲ್ಲುಗಾರ್ತಿ ಸುರಪುರದಿಂದ ತನ್ನ ಸಹೋದರನೊಂದಿಗೆ ವಿಜಯಪುರಕ್ಕೆ ಬಂದು ಸಚಿವ ಎಂ. ಬಿ. ಪಾಟೀಲ ಅವರನ್ನು ಭೇಟಿಯಾದಳು. ಅಲ್ಲದೇ, ತಾನು ಮೈಸೂರು ದಸರಾ, ಗೋವಾ, ಉಡುಪಿ ಮುಂತಾದ ಕಡೆ ನಡೆದ ಸ್ಪರ್ಧೆಗಳಲ್ಲಿ ಗೆದ್ದ ಚಿನ್ನ ಮತ್ತು ಬೆಳ್ಳಿಯ ಪದಕಗಳನ್ನು ಸಚಿವರಿಗೆ ತೋರಿಸಿ ಸಂತಸ ವ್ಯಕ್ತಪಡಿಸಿದಳು. ತನ್ನ ಸಾಧನೆಗೆ ಸಚಿವರು ನೀಡಿದ ಸಹಾಯ ಪ್ರಮುಖ ಕಾರಣ ಎಂದು ಧನ್ಯವಾದ ಹೇಳಿದಳು.

ವಿದ್ಯಾರ್ಥಿನಿಯ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಚಿವ ಎಂ. ಬಿ. ಪಾಟೀಲ ಅವರು, ಗ್ರಾಮೀಣ ಪ್ರತಿಭೆಗೆ ನೀಡಿದ ಪ್ರೋತ್ಸಾಹದಿಂದಾಗಿ ಅತ್ಯುತ್ತಮ ಸಾಧನೆ ಮಾಡಿದ್ದಾಳೆ. ಒಲಿಂಪಿಕ್ಸ್ ದಾರಿಯಲ್ಲಿ ಕಲ್ಯಾಣ ಕರ್ನಾಟಕದ ಬಿಲ್ಲುಗಾರ್ತಿ ದೇವಮ್ಮ ಮುಂದೆ ಸಾಗಲಿ ಎಂದು ಶುಭ ಹಾರೈಸಿದರು.

ಬಡ ಕುಟುಂಬದ ದೇವಮ್ಮ ತಮ್ಮ ಸಾಧನೆಯ ಪಯಣವನ್ನು ಹಂಚಿಕೊಂಡಿದ್ದು, ಅವರ ಪರಿಶ್ರಮ ಮತ್ತು ಛಲಕ್ಕೆ ಮನಸೋತಿದ್ದೇನೆ. ತಂದೆಯನ್ನು ಕಳೆದುಕೊಂಡು, ಸೀಮಿತ ಆರ್ಥಿಕ ಸೌಲಭ್ಯಗಳ ನಡುವೆಯೂ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡುತ್ತಿರುವ ದೇವಮ್ಮ ಅವರ ಕನಸುಗಳಿಗೆ ಬೆಂಬಲವಾಗಿ ನಿಲ್ಲುವುದು ನಮ್ಮ ಕರ್ತವ್ಯ. ಅವರಿಗೆ ಮುಂದಿನ ದಿನಗಳಲ್ಲಿ ಒಲಿಂಪಿಕ್ ಮಟ್ಟದ ತರಬೇತಿ ಮತ್ತು ಅಗತ್ಯ ಕ್ರೀಡಾ ಪರಿಕರಗಳಿಗಾಗಿ ಎಲ್ಲ ರೀತಿಯ ಸಹಕಾರ ನೀಡುತ್ತೇನೆ. ಪ್ರತಿಭೆಗೆ ಪ್ರೋತ್ಸಾಹ, ಪರಿಶ್ರಮಕ್ಕೆ ಬೆಂಬಲ ದೊರೆತರೆ ಗ್ರಾಮೀಣ ಕ್ರೀಡಾಪಟುಗಳೂ ಜಾಗತಿಕ ವೇದಿಕೆಯಲ್ಲಿ ಮಿಂಚಬಲ್ಲರು. ದೇವಮ್ಮ ಅವರು ಒಲಿಂಪಿಕ್ಸ್‌ನಲ್ಲಿ ಭಾರತದ ಪರ ಪದಕ ಗೆಲ್ಲುವ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

### ಸಿ ಸಿ ರಸ್ತೆ ಭೂಮಿ ಪೂಜೆ ನೆರವೇರಿಸಿದ ಶಾಸಕ ಅಶೋಕ ಮನಗೂಳಿ ಭರವಸೆ

# ಎಲ್ಲ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸಲು ಬದ್ಧ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಭೀಮಾ ನದಿಯ ದಡಯಲ್ಲಿರುವ ಹಳ್ಳಿಗಳ ಜನರು ಸೊನ್ನ ಏತ ನೀರಾವರಿ ಹಿನ್ನೀರಿನಿಂದ ಬಾಧಿತ ಒಳಗಾಗಿಇಲ್ಲಿನಜನರುಮನೆ,ಮಠಗಳನ್ನು, ನೂರಾರು ಎಕರೆ ಜಮೀನುಗಳನ್ನು ಕಳೆದುಕೊಂಡು ನಿರಾಶ್ರಿತರಾಗಿ ಅವಕಾಶಗಳಿಂದ ವಂಚಿತರಾಗಿದ್ದಾರೆ ಈ ಎಲ್ಲಾ ಗ್ರಾಮಗಳನ್ನು ಪುನಶ್ಚೇತನ ಗೊಳಿಸುವದರ ಜೊತೆಗೆ ಎಲ್ಲಾ ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಸರಕಾರ ಒದಗಿಸಬೇಕಾಗಿತ್ತು. ಯಾವದೋ ಕಾರಣಗಳಿಂದ ನೆನೆಗುಂದಿಗೆ ಬಿದ್ದಿರುವ ಎಲ್ಲಾ ಕಾಮಗಾರಿಗಳನ್ನು ಹಂತ ಹಂತವಾಗಿ ಈ ಭಾಗದ ಎಲ್ಲಾ ಗ್ರಾಮಗಳಿಗೆ ತಂದು ಮುಟ್ಟಿಸುವಂತೆ ಮಾಡುವುದು ನನ್ನ ಕರ್ತವ್ಯವಾಗಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ತಾರಾಪುರ ಗ್ರಾಮದಲ್ಲಿ ರವಿವಾರ ದಿನಸ 2024– 25 ನೇ ಸಾಲಿನ ಮಳೆ ಪರಿಹಾರ ಯೋಜನೆಯ ಅಡಿಯಲ್ಲಿ 25 ಲಕ್ಷ ರೂ.ವೆಚ್ಚದಲ್ಲಿ ಸಿ ಸಿ ರಸ್ತೆ ಹಾಗೂ ಚರಂಡಿ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತಿದ್ದರು. ತಾರಾಪುರ, ತಾವರಖೇಡ, ಮದನಹಳ್ಳಿ, ಬ್ಯಾಡಗಿಹಾಳ ಗ್ರಾಮಗಳನ್ನು ಭೀಮಾ ನದಿಯ ಹಿನ್ನೀರಿನಿಂದ ಪುನರ್ವಸತಿ ಆದಂತ ಗ್ರಾಮಗಳು ಮೂಲಭೂತ ಸೌಕರ್ಯಗಳಿಗೆ ವಂಚಿತವಾದ ಗ್ರಾಮಗಳಿಗೆ ಈಗಾಗಲೇ ಒಂದಷ್ಟು ಹಣ ಮಂಜೂರಾಗಿದ್ದು ಇನ್ನೂ ಉಳಿದ ತಾರಾಪುರ ಗ್ರಾಮದ ಪುನರ್ವಸತಿ ಗ್ರಾಮದಲ್ಲಿ ಬಾಕಿ ಉಳಿದಂತ ಕಾಮಗಾ–ರಿಕೆಗೆ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲು ಪ್ರಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು



ಕಾರ್ಯಕ್ರಮದ ಸಾನಿಧ್ಯ ಗುರುಲಿಂಗ ಶಿವಾಚಾರ್ಯರು ವಹಿಸಿಕೊಂಡರು ಮುಖ್ಯಅತಿಥಿಗಳಾಗಿ ರಮೇಶ್ ಬಂಟನೂರ ನಾಗರಿಕ ವೇದಿಕೆಯ ಅಧ್ಯಕ್ಷರು ಆಲಮೇಲ. ಪ್ರಭು ವಾಲಿಕಾರ ಮಾಜಿ ಎಪಿಎಂಸಿ ಅಧ್ಯಕ್ಷರು ಆಲಮೇಲ. ಸಾಧಿಕ್ ಸುಂಬಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಆಲಮೇಲ ಬಸವರಾಜ್ ತೆಲ್ಲೂರ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ಆಲಮೇಲ, ಸೋಮು ಮೇಲಿನಮನಿ, ಬಸಲಿಂಗಪ್ಪ ಕತ್ತಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಕಡಣಿ ಸೇರಿದಂತೆ ಹಲವರಿದ್ದರು.

# ಇಂಡಿಯಲ್ಲಿ ನವರಾತ್ರಿಗೆ ದಾಂಡಿಯಾ ನೃತ್ಯದ ಸೊಬಗು

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಸಾಂಪ್ರದಾಯಿಕ ದಾಂಡಿಯಾ ನೃತ್ಯ ಇಂಡಿಯಲ್ಲಿ ಪ್ರಸಿದ್ಧಿ ಗಳಿಸಿದೆ.

ನಗರದ ಶ್ರೀ ಅಂಬಾಭವಾನಿ ದೇವಸ್ಥಾನ, ಶ್ರೀ ದಾನಮ್ಮದೇವಿ ದೇವಸ್ಥಾನ, ದುರ್ಗಾ ಪರಮೇಶ್ವರಿ ಉತ್ಸವ ಮಂಢಳಿ, ಭುವನೇಶ್ವರಿ ಯುವಕ ಮಂಡಳಿ ಕುಂಬಾರ ಓಣಿ, ಶ್ರೀ ಅಂಬಾಭವಾನಿ ಯುವಕ ಮಂಡಳಿ ಹೂಗಾರ ಓಣಿ ಶ್ರೀ ಅಂಬಾಭವಾನಿ ಯುವಕ ಮಂಡಳಿ ಚವಡಿ ಓಣಿ ಯಲ್ಲಿ ಮಹಿಳೆಯರಿಂದ ದಾಂಡಿಯಾ ನೃತ್ಯ ನಡೆಯುತ್ತದೆ. ನವರಾತ್ರಿ ಹಬ್ಬದಂದು ದುರ್ಗಾ ಪೂಜೆಯ ಜೊತೆಗೆ ಸಂಪ್ರದಾಯಿಕ ನೃತ್ಯ ದಾಂಡಿಯಾ ರಾಸ್ ಮೆರಗು ನೀಡುತ್ತದೆ. ಇದರ ಜೊತೆಗೆ ದಾಂಡಿಂ–ಯಾ ಸ್ಪರ್ಧೆಗಳು ನೃತ್ಯ ಕಾರ್ಯಗಳು ನಡೆಯುತ್ತವೆ. ಎಲ್ಲ ಸಮುದಾಯದ ಮಹಿಳೆಯರು ನಗರದ ವಿವಿಧ ನವರಾತ್ರಿ ಉತ್ಸವಗಳಲ್ಲಿ ಭಾಗಿಯಾಗಿ ದುರ್ಗಾ ಪೂಜೆ ಮತ್ತು ದಾಂಡಿಯಾ ಆಯೋಜನೆ ಗಮನ ಸೆಳೆಯುತ್ತದೆ. ಸಂಜೆಯ ಪೂಜಾ ಕಾರ್ಯಕ್ರಮಕ್ಕೂ ಮುಂಚೆ ಮತ್ತು ಪೂಜಾ ಕಾರ್ಯಕ್ರಮದ ನಂತರ ದಾಂಡಿಯಾ ನೃತ್ಯ ವಿಶೇಷವಾಗಿ ಗಮನ ಸೆಳೆಯುತ್ತದೆ. ಶಾಲಾ ಕಾಲೇಜುಗಳಿಗೆ ರಜೆ ನಿಮಿತ್ಯ ವಿದ್ಯಾರ್ಥಿನಿಯರು ವಿಶೇಷವಾಗಿ ಪಾಲ್ಗೊಳ್ಳುವರು. ಸಾಮಾನ್ಯವಾಗಿ ಸಂಜೆಯಾಗುತ್ತಿದ್ದಂತೆ ಗರ್ಭಾ ನೃತ್ಯವನ್ನು ಆಯೋಜಿಸುತ್ತಾರೆ, ಗರ್ಭಾ ನೃತ್ಯಕ್ಕೂ ದಾಂಡಿಯಾ ನೃತ್ಯಕ್ಕೂ ಸಣ್ಣ ಭಿನ್ನತೆ ಇದೆ. ಗರ್ಭಾ ನೃತ್ಯ ಪೂಜೆಯ ಮೊದಲು ನಡೆದರೆ ದಾಂಡಿಯಾ ನಂತರ ನಡೆಯುತ್ತದೆ. ಗರ್ಭಾ ನೃತ್ಯಕ್ಕೆ ಕೋಲಿನ ಅವಶ್ಯಕತೆ ಇಲ್ಲ, ದಾಂಡಿಯಾದಲ್ಲಿ ಕೋಲಾಟವೇ ಪ್ರಧಾನ, ದಾಂಡಿಂ–ಯಾ ಕೇವಲ ನವರಾತ್ರಿಗೆ ಸೀಮಿತವಾಗಿಲ್ಲ, ಸಂತೋಷ ಕ್ಷಣಗಳೆಲ್ಲ ಇದು ವಿಜೃಂಬಿಸುತ್ತದೆ. ಹೆಚ್ಚಾಗಿ ಮಹಿಳೆಯರೇ ಭಾಗವಹಿಸುತ್ತಿದ್ದ ಈ ನೃತ್ಯದಲ್ಲಿ ಇತ್ತೀಚಿಗೆ ಪುರುಷರೂ ಹೆಜ್ಜೆ ಹಾಕುತ್ತಾರೆ. ಡೊಳ್ಳು ಕುಣಿತ ಭಕ್ತಿ ನಾಚ್ ಧನುಚಿ ನಾಚ ಪ್ರಮುಖ ಆಕರ್ಷಣೆಗಳಾಗಿವೆ.



Printed by: AVINASH BIDARI, Published and owned by: SHAILA INDUSHEKHAR MANUR Printed at: ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. Published at: At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..Editor : INDUSHEKHAR MANUR